ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯೂನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 6 ಸಂಚಿಕೆ 38 ಸೆಪ್ಟೆಂಬರ್ 16, 1984 ಬೆಲೆ 60 ಪೈಸೆ.

ಮುಂಬರುವ ಲೋಕಸಭೆ ಚುನಾವಣೆಯಲ್ಲಿ

ಪ್ರಜಾಪ್ರಭುತ್ವದ ರಕ್ಷಣೆಗಾಗಿ ಕಾಂಗ್ರೆಯನ್ನು ಸೋಲಿಸಲು ಕಾ|| ಇ. ಎಂ. ಎಸ್. ಕರೆ

ಪ್ರಜಾಪ್ರಭುತ್ವದ ರಕ್ಷಣೆಗಾಗಿ, ಮುಂಬರುವ ಚುನಾವಣೆಯಲ್ಲಿ ಇತರ ಪಕ್ಷಗಳೊಡನೆ ಸೇರಿಕೊಂಡು ಸರ್ವಾಧಿಕಾರಿ ಶಕ್ತಿ ಇಂದಿರಾ ಕಾಂಗ್ರೆಸ್ಸನ್ನು ಸಂಪೂರ್ಣ ಸೋಲಿಸಬೇಕೆಂದು ಸಿಪಿಐ (ಎಂ) ಪಕ್ಷದ ಪ್ರಧಾನ ಕಾರ್ಯದರ್ಶಿಯವರಾದ ಕಾ. ಇ. ಎಂ. ಎಸ್. ನಂಬೂದಿರಿಪಾದ್ ಅವರು 12-9-84 ರಂದು ಬೆಂಗಳೂರಿನ ಸಿಲ್ವರ್ ಜುಬಿಲಿ ಪಾರ್ಕಿನಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಕರ್ನಾಟಕದ ಜನರಿಗೆ ಕರೆ ನೀಡಿದರು.

ನಲ್ವತ್ತೆರಡು ಗಂಟೆ ಹೈದರಾಬಾದಿನಲ್ಲಿದ್ದು ಅಲ್ಲಿಯ ಘಟನೆಗಳನ್ನು ಸಮಕ್ಷಮ ಅರಿತುಕೊಂಡ ಕಾ. ನಂಬೂದಿರಿಪಾದ್ ಅವರು ಆಂಧ್ರದಲ್ಲಿಯು ಎರಡು ಮೂರಾಂಶ ಶಾಸಕರ ಬೆಂಬಲ ರಾಮರಾಯರಿಗಿದ್ದರೂ ಕೂಡ, ತಾ|| 11 ರಂದು ಯಾರಿಗೆ ಬಹುಮತವಿದೆಂಬ ಪ್ರಶ್ನೆ ಇತ್ಯರ್ಥಗೊಳಿಸುವ ಸಲುವಾಗಿಯೇ ಶಾಸನ ಸಭೆಯನ್ನು ಕರೆದಿದ್ದರೂ ಕೂಡ, ಆಂಧ್ರದ ಜನಾಭಿಪ್ರಾಯಕ್ಕೆ ಒಪ್ಪಿಕೊಳ್ಳಲು ಕೇಂದ್ರ ಸರಕಾರವಾಗಲೀ, ಬಾಸ್ಕರರಾವ್ ಆಗಲೀ, ಆಂಧ್ರದ ರಾಜ್ಯಪಾಲ ಶಂಕರದಯಾಳ್ ಶರ್ಮಾ ಅವರಾಗಲೀ ತಯಾರಿಲ್ಲೆಂದೂ ಹೇಳಿದರು.

1959 ರಲ್ಲಿ ಇದೇ ಇಂದಿರಾ ಗಾಂಧಿ ಕಾಂಗ್ರೆಸ್ ಅಧ್ಯಕ್ಷೆಯಾಗಿ ತನ್ನ ಸರಕಾರವನ್ನು ಉರುಳಿಸಿದಾಗ ಇತರ ವಿರೋಧ ಪಕ್ಷಗಳಾಗಲೀ, ಜನತೆಯಾಗಲಿ ಹೆಚ್ಚು ಪ್ರತಿಭಟನೆ ವ್ಯಕ್ತ ಮಾಡಿದ್ದಿಲ್ಲ. ಈಗ ಆಂಧ್ರದ ರಾಮರಾವ್ ಸರಕಾರದ ವಿಸರ್ಜನೆಯಾದಾಗ ಸಮಗ್ರ ಆಂಧ್ರದ, ಅಷ್ಟೇ ಅಲ್ಲ ಇಡೀ ದೇಶದ ಜನತೆ ಹಾಗೆಯೇ ಎಲ್ಲಾ ವಿರೋಧ ಪಕ್ಷಗಳು, ರಾಜಕೀಯ ಭಿನ್ನಾಭಿಪ್ರಾಯವಿದ್ದರೂ ಕೂಡ ಸಂವಿಧಾನಕ್ಕಾದ ಅನ್ಯಾಯ, ಪ್ರಜಾಪ್ರಭುತ್ವದ ಕೊಲೆಯ ವಿರುದ್ಧ ಪ್ರಚಂಡ ಐಕ್ಯತೆಯ ಹೋರಾಟ ನಡೆಸಿರುವುದೂ, ಈ ಹೋರಾಟದಲ್ಲಿ ಕಾರ್ಮಿಕರೂ, ಇತರ ಜನವಿಭಾಗವೂ ಸ್ವಯಂಸ್ಫೂರ್ತಿಯಿಂದ ಪಾಲ್ಗೊಂಡಿರುವುದೂ ಮೆಚ್ಚತಕ್ಕದ್ದಷ್ಟೇ ಅಲ್ಲ, ಹೊಸ ಶುಭದಾಯಕ ಚಿನ್ಹೆಯಾಗಿದೆಂದು ಹೇಳಿದರು.

ರಾಜ್ಯಪಾಲರನ್ನು – ರಾಜಕಾರಣಿಗಳಾಗಲೀ, ಐ.ಎ.ಎಸ್. ಅಧಿಕಾರಿಗಳಾಗಲೀ–ದಿಲ್ಲಿಯಿಂದ ಬೇರೆ ಬೇರೆ ರಾಜ್ಯಗಳಿಗೆ ಕಳುಹಿಸಲಾಗುತ್ತಿದೆ. ಕೇಂದ್ರದ ಧೋರಣೆಯಂತೆ ಅವರು ವರ್ತಿಸದಿದ್ದರೆ ಅವರನ್ನು ತೆಗೆದು ಹಾಕಲಾಗುತ್ತಿದೆ, ಅಥವಾ ರಾಜೀನಾಮೆ ಕೊಡಲು ಒತ್ತಾಯಿಸಲಾಗುತ್ತಿದೆ. ಆದ್ದರಿಂದ ರಾಜ್ಯಪಾಲರ ಹುದ್ದೆಯನ್ನು ರದ್ದು ಮಾಡಬೇಕೆಂದು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ಕೇಳಿಕೊಳ್ಳುತ್ತದೆ.

ಇಂದಿರಾ ಗಾಂಧಿ ತನಗೆ ಬೇಕಾದ ರಾಜ್ಯಪಾಲರನ್ನು ನೇಮಿಸುತ್ತಾರೆ, ಬೇಡಾದವರನ್ನು ಕಿತ್ತೊಗೆಯುತ್ತಾರೆ. ಹಾಗೆಯೇ ಇಂದಿರಾ ಗಾಂಧಿಯನ್ನು ಮುಂಬರುವ ಲೋಕಸಭೆ ಚುನಾವಣೆಯಲ್ಲಿ ಅಧಿಕಾರದಿಂದ ಕಿತ್ತು ಹಾಕುವುದು ಜನರ ಕರ್ತವ್ಯ.

ಕಾಂಗ್ರೆಸ್ಸನ್ನು ಸೋಲಿಸ ಬೇಕಾದರೆ ಎಲ್ಲರೂ ಲೋಕದಳದಲ್ಲಿ ಸೇರಬೇಕೆಂದು ಚರಣಸಿಂಗ್ ಹೇಳುತ್ತಾರೆ. ನಾವು ಅದನ್ನು ಒಪ್ಪುವುದಿಲ್ಲ. ಸಿಪಿಐ (ಎಂ) ಕಾರ್ಮಿಕ ವರ್ಗದ ಪಕ್ಷ. ನಮ್ಮ ಕಾರ್ಯಕ್ರಮ, ರಾಜಕೀಯ ಧೋರಣೆ ಮತ್ತು ನಮ್ಮ ಧ್ವಜಡಡಿಯಲ್ಲೇ ನಾವು ಹೋರಾಡುತ್ತೇವೆ. ನಮ್ಮ ಧ್ವಜ ಮತ್ತು ಕಾರ್ಯಕ್ರಮ ಉಳಿಯಲೇ ಬೇಕು.

1977 ರಲ್ಲಿ ದೇಶದಲ್ಲಿ ಹಾಗೆಯೇ 1983 ರಲ್ಲಿ ಕರ್ನಾಟಕದಲ್ಲಿ ನಾವು ಹೊಂದಾಣಿಕೆ ಮಾಡಿಕೊಂಡು ಹೋರಾಡಿದ್ದೆವು. ಆಗ ಕಾಂಗ್ರೆಸ್ಸನ್ನು ಸೋಲಿಸಲು ಸಾಧ್ಯವಾಯಿತು.

ರಾಜಕೀಯವಾಗಿ, ಆರ್ಥಿಕವಾಗಿ ನಮ್ಮ ನಮ್ಮೊಳಗೆ ಭಿನ್ನಾಭಿಪ್ರಾಯವಿದ್ದರೂ ಕೂಡ ಕಾಂಗ್ರೆಸ್ಸನ್ನು ಸೋಲಿಸಲೇ ಬೇಕೆಂಬ ದೃಢ ನಿರ್ಧಾರವಿದ್ದವರ ಜೊತೆಯಲ್ಲಿ ನಿರ್ದಿಷ್ಟ ಸಮಸ್ಯೆಯ ಸಲುವಾಗಿ ನಾವು ಒಟ್ಟಾಗಿ ಹೋರಾಡಬಹುದು. ಬಿಜೆಪಿ ಮತ್ತು ನಮ್ಮೊಳಗೆ ನೂರಾರು ಭಿನ್ನಾಭಿಪ್ರಾಯಗಳಿದ್ದರೂ ಕೂಡ ವಿರೋಧ ಪಕ್ಷಗಳ ಸರಕಾರಗಳನ್ನುರುಳಿಸುವ ಇಂದಿರಾ ಧೋರಣೆಯ ವಿರುದ್ಧ ನಾವೆಲ್ಲರೂ ಕೂಡಿ ಚಳುವಳಿ ಹೂಡುತ್ತಿದ್ದೇವೆಂದು ಕಾ| ಇ.ಎಂ.ಎಸ್. ಹೇಳಿದರು.

ಅವರು ಮತ್ತೂ ಹೇಳಿದ್ದೇನೆಂದರೆ, ಮುಂಬರುವ ಲೋಕಸಭೆಯ ಚುನಾವಣೆಯಲ್ಲಿ ವಿರೋಧ ಪಕ್ಷಗಳಿಗೆ ಬಹುಮತ ಬಂದರೂ ಕೂಡ ನಮಗೆ ಅಧಿಕಾರ ಬೇಡ, ನಾವು ಸರಕಾರದಲ್ಲಿ ಸೇರ್ಪಡೆಯಾಗುವುದಿಲ್ಲ. ಕಾರ್ಮಿಕರನ್ನೂ, ರೈತರನ್ನೂ ಸಂಘಟಿಸಿ ಹೋರಾಟ ಮಾಡಲು ನಮಗೆ ಸಂಪೂರ್ಣ ಸ್ವಾತಂತ್ರ್ಯ ಬೇಕು.

ಕಾಂಗ್ರೆಸ್ಸೇತರ ಪಕ್ಷಗಳಿಗೆ ನಮ್ಮ ಆಶ್ವಾಸನೆ ಏನೆಂದರೆ, ನಾವು ನಿಮ್ಮ ಸರಕಾರಕ್ಕೆ ಬೆಂಬಲ ಕೊಡುತ್ತೇವೆ. ಆದರೆ ದುಡಿಯುವ ಜನತೆಯ, ರೈತರ ಹಾಗೆಯೇ ಇತರ ಜನವಿಭಾಗದ ಹೋರಾಟ ನಡೆಸಲಿಕ್ಕೆ ನಮಗೆ ಸ್ವಾತಂತ್ರ್ಯ ಕೊಡಿ. 35 ವರ್ಷಗಳಲ್ಲಿ ಕಾಂಗ್ರೆಸ್ ಮಾಡಿದಂತೆ ವರ್ತಿಸಬೇಡಿ. ಜನ ಜಾಗೃತರಾಗಿದ್ದಾರೆ. ಒಳ್ಳೆ ಅವಕಾಶವಿದೆ. ಅದನ್ನು ಉಪಯೋಗ ಮಾಡಿಕೊಳ್ಳಿ ಎಂದು ಕಾ| ಇ.ಎಂ.ಎಸ್. ಬುದ್ಧಿ ಮಾತು ಹೇಳಿದರು.

ಜನತಾ ಪಕ್ಷ ಇತ್ತೀಚೆಗೆ ಬಿಡುಗಡೆ ಮಾಡಿದ ಶ್ವೇತ ಪತ್ರದಲ್ಲಿ ಇಂದಿರಾ ಗಾಂಧಿ 1959 ರಿಂದಲೇ ವಿರೋಧ ಪಕ್ಷಗಳ ಮಾತ್ರವಲ್ಲ ತನ್ನ ಪಕ್ಷದ ಸರಕಾರಗಳನ್ನೂ ಉರುಳಿಸುತ್ತಲೇ ಬಂದಿದ್ದಾರೆಂದೂ, ತಾನು ಅಧಿಕಾರಕ್ಕೆ ಬಂದ ನಂತರ ತನ್ನ ಇಚ್ಛೆಗೆ ವಿರುದ್ಧವಾಗಿ ಕಂಡು ಬಂದ ತನ್ನ ಪಕ್ಷದ ಸರಕಾರಗಳನ್ನೇ ಉರುಳಿಸುತ್ತ ಬಂದಿದ್ದಾರೆಂಬುದನ್ನೂ, ಚುನಾಯಿತ ಸರಕಾರಗಳು ಐದು ವರ್ಷ ಅಧಿಕಾರ

(8ನೇ ಪುಟ ನೋಡಿ)

ಪಶ್ಚಿಮ ಬಂಗಾಲಕ್ಕೂ ಕರಾಳ ಹಸ್ತ ?

ಪಶ್ಚಿಮ ಬಂಗಾಲದ ಎಡರಂಗ ಸರಕಾರವನ್ನು ಕಿತ್ತೊಗೆದು ಅಲ್ಲಿ ರಾಷ್ಟ್ರಾಧ್ಯಕ್ಷರ ಆಡಳಿತ ಹೇರುವ ಒಳಸಂಚನ್ನು ಕೇಂದ್ರ ಸಿದ್ಧಗೊಳಿಸುತ್ತಿದೆಂಬ ಆರೋಪ ಮಾಡಿದವರು ಪಶ್ಚಿಮ ಬಂಗಾಲದ ಮುಖ್ಯ ಮಂತ್ರಿ ಜ್ಯೋತಿ ಬಸು.

ಎಡರಂಗದ ಶಾಸಕರನ್ನು ಕೊಂಡು ಕೊಳ್ಳುವುದು ಶಕ್ಯವಾಗದುದರಿಂದ ಭಾರತ ಒಕ್ಕೂಟದ ಒಂದು ಅಂಗವನ್ನು ಆರ್ಥಿಕವಾಗಿ ದುರ್ಬಲಗೊಳಿಸಿ ತನ್ನ ಧ್ಯೇಯ ಸಾಧಿಸುವ ಸಂಚನ್ನು ಕೇಂದ್ರ ಅನುಸರಿಸುತ್ತಿದೆಂದು ಬಸು ಅವರು ಆರೋಪಿಸಿದ್ದಾರೆ.

ಯೋಜನಾ ಆಯೋಗ ಪ. ಬಂಗಾಲ ಸರಕಾರದ ವಾರ್ಷಿಕ ಯೋಜನೆಗೆ ಇನ್ನೂ ಒಪ್ಪಿಗೆ ನೀಡಿಲ್ಲ. ಈ ವರ್ಷ ಅನುಷ್ಠಾನದಲ್ಲಿ ತರಬಾರದೆಂಬ ಕೇಂದ್ರದ ದುರುದ್ದೇಶದಿಂದಾಗಿ 8 ನೇ ಹಣ ಕಾಸಿನ ಆಯೋಗದ ಶಿಫಾರಸುಗಳಿಗನುಸಾರವಾಗಿ ರಾಜ್ಯಕ್ಕೆ ಬರತಕ್ಕ ಧನ ಸಹಾಯ ಕೊಟ್ಟಿಲ್ಲ. ಆಯೋಗದ ಶಿಫಾರಸಿನಂತೆ ಕಾಂಗ್ರೆಸ್ ಆಳುವ ರಾಜ್ಯಗಳಿಗೆ ಧನ ಸಹಾಯ ಕೊಡಲಾಗಿದೆ. ಆದರೆ ಕುಂಟುನೆವ ಮುಂದೆ ಮಾಡಿ ಭಾರತದ ಒಕ್ಕೂಟದ ಒಂದು ಅಂಗವಾದ ನಮಗೆ ಅಂಥ ಧನ ಸಹಾಯ ನಿರಾಕರಿಸಲಾಗಿದೆ.

ಈ ವರ್ಷಾವಧಿಯಲ್ಲಿ ಅರ್ಥ ಕಮಿಟಿಯ ಶಿಫಾರಸಿನಂತೆ ಧನ ಸಹಾಯ ಮಾಡಲು ಕೇಂದ್ರ ನಿರಾಕರಿಸುತ್ತಿದೆ. ಕಾಂಗ್ರೆಸ್ ಪಕ್ಷದ ಆಡಳಿತೆಯಲ್ಲಿರುವ ರಾಜ್ಯಗಳಿಗೆ ಅರ್ಥ ಕಮಿಟಿಯ ಶಿಫಾರಸಿನಂತೆ ಹಲವಾರು ನೆವಗಳಲ್ಲಿ ಹಣ ಸಹಾಯವನ್ನೊದಗಿಸುತ್ತಿರುವಾಗ, ನಮಗದನ್ನು ನಿರಾಕರಿಸಲಾಗುತ್ತಿದೆಂದು ಜ್ಯೋತಿ ಬಸು ಆರೋಪಿಸಿದ್ದಾರೆ.

"ನಿಮ್ಮ ರಾಜ್ಯದ ವ್ಯವಹಾರಗಳನ್ನು ನಡೆಸಲು ನೀವು ಅಸಮರ್ಥರಾಗಿರುವುದರಿಂದ ನೀವು ಹೋಗುವುದು ಒಳಿತು. ನಾನು ರಾಷ್ಟ್ರಾಧ್ಯಕ್ಷರ ಆಡಳಿತೆಯನ್ನು ಹೇರುತ್ತೇನೆ" ಎಂದು ಒಂದು ದಿವಸ ಅಕಸ್ಮಾತ್ತಾಗಿ ಕೇಂದ್ರ ಹೇಳ ಬಹುದೆಂದೂ ಬಸು ಅವರು ಸಂಶಯ ವ್ಯಕ್ತಪಡಿಸಿದರು.

"ಯಾವ ದೃಷ್ಟಿಯಲ್ಲಿ ನೋಡಿದರೂ ಕೂಡ ಕಾಂಗ್ರೆಸ್ಸನ್ನು ಪ್ರಜಾಪ್ರಭುತ್ವವಾದಿ ಸಂಘಟನೆ ಎಂದು ಹೇಳಲು ಸಾಧ್ಯವೇ ಇಲ್ಲ. ಕಳೆದ 13 ವರ್ಷಗಳಿಂದಲೂ ಚುನಾವಣೆಯನ್ನೇ ನಡೆಸದ ಪಕ್ಷ ಪ್ರಜಾಪ್ರಭುತ್ವವಾದಿ ಹೇಗಾಗಬಹುದು ಮತ್ತು ಅಂಥ ಪಕ್ಷ ದೇಶದಲ್ಲಿ ಪ್ರಜಾಪ್ರಭುತ್ವ ಸಿದ್ಧಾಂತಕ್ಕೆ ಅಂಟಿ ಕೊಳ್ಳುವುದಾದರೂ ಹೇಗೆ?" ಎಂಬ ಆಶ್ಚರ್ಯವನ್ನು ಜ್ಯೋತಿ ಬಸು ವ್ಯಕ್ತ ಮಾಡಿದರು.

"ಶಾಸಕರನ್ನೂ ಲೋಕ ಸಭಾ ಸದಸ್ಯರನ್ನೂ ದನಗಳಂತೆ ಕೊಂಡು ಕೊಳ್ಳಲಾಗುತ್ತಿದೆ. ಮಾರಾಟ ಮಾಡಲಾಗುತ್ತಿದೆ. ಇದರಿಂದ ನನಗೆ ನಾಚಿಕೆಯಾಗುತ್ತದೆ. ಈ ವ್ಯಾಪಾರ ಪ್ರಾರಂಭಿಸಿದವರು ಕಾಂಗ್ರೆಸ್ಸಿನವರೇ" ಎಂದು ಬಸು ಹೇಳಿದರು.

ಕಾಂಗ್ರೆಸ್ ಈ ವ್ಯವಹಾರಕ್ಕೆ ಕೈ ಯಾಕೆ ಹಾಕಿದೆಯೆಂದರೆ ನೈತಿಕತೆಯ ಎಳೆಯನ್ನು ನಾಶಮಾಡುವ ದುರುದ್ದೇಶದಿಂದ ಎಂದೂ, ನೈತಿಕತೆಯ ಬೆನ್ನೆಲುಬು ಮುರಿದರೆ ಜನರು ವಿಚಾರ ಹೀನರಾಗುತ್ತಾರೆ. ಅಂಥವರನ್ನು ಸುಲಭವಾಗಿ ಆಳ ಬಹುದು. ಇಂದಿರಾ ಕಾಂಗ್ರೆಸ್ ಅಂಥವರ ಮೇಲೆ ಆಡಳಿತ ನಡೆಸಲು ಇಚ್ಛಿಸುತ್ತದೆ. ಕರ್ನಾಟಕದಲ್ಲಿ ಕಾಂಗ್ರೆಸ್ ವಿರೋಧಿ ಸರಕಾರನ್ನುರುಳಿಸುವ ಪ್ರಯತ್ನ ನಡೆದಿದೆಂದೂ, ತ್ರಿಪುರಾ, ಪಶ್ಚಿಮ ಬಂಗಾಲಗಳಲ್ಲೂ ಆ ರೀತಿ ಆಗಬಹುದೆಂಬ ಸಂಶಯವನ್ನು ಜ್ಯೋತಿ ಬಸು ಅವರು ವ್ಯಕ್ತ ಮಾಡಿ, ಪಶ್ಚಿಮ ಬಂಗಾಲದಲ್ಲಿ ಶಾಸಕರನ್ನು ಕೊಂಡು ಕೊಳ್ಳುವ ಪ್ರಯತ್ನ ಮಾಡಲಾಯಿತೆಂದೂ, ಆದರೆ ಎಡರಂಗದ ಶಾಸಕರನ್ನು ಖರೀದಿ ಮಾಡುವುದು ಬಹಳ ಕಷ್ಟಕರವೆಂದು ಒಬ್ಬ ಕೇಂದ್ರದ ಮಂತ್ರಿ ಹೇಳಿದರೆಂದೂ ಜ್ಯೋತಿ ಬಸು ಬಹಿರಂಗ ಪಡಿಸಿದರು.

(ಸೆಪ್ಟೆಂಬರ್ 2 ರಂದು ಕಲ್ಕತ್ತದಲ್ಲಿ ನೆರೆದಿದ್ದ ಪ್ರಚಂಡ ಸಾರ್ವಜನಿಕ ಸಭೆಯಲ್ಲಿ ಜ್ಯೋತಿ ಬಸು ಅವರು ಮಾಡಿದ ಭಾಷಣದ ಸಾರಾಂಶ)

ಸಂವಿಧಾನ ಹಾಗೂ ರಾಜ್ಯಪಾಲರು

ಜಮ್ಮು-ಕಾಶ್ಮೀರ ಮತ್ತು ಆಂಧ್ರ ಪ್ರದೇಶದ ಇತ್ತೀಚಿನ ರಾಜಕೀಯ ವಿದ್ಯಮಾನಗಳ ಹಿನ್ನೆಲೆಯಲ್ಲಿ "ಸಂವಿಧಾನ ಹಾಗೂ ರಾಜ್ಯ ಪಾಲರು" ಎಂಬ ವಿಷಯದ ಕುರಿತು ದಿನಾಂಕ 24-8-84 ರಂದು ಕಿಕ್ಕಿಂದ ಕರ್ನಾಟಕ ಸಂಘ ಭವನದಲ್ಲಿ "ಜನಹಿತ ರಕ್ಷಣಾ ಸಮಿತಿಯ" ಆಶ್ರಯದಲ್ಲಿ ಒಂದು ವಿಚಾರ ಸಂಕಿರಣ ಶಿವಮೊಗ್ಗದಲ್ಲಿ ನಡೆಯಿತು

ಅಧ್ಯಕ್ಷತೆ ವಹಿಸಿದ್ದ ನಗರದ ನ್ಯಾಯವಾದಿಗಳಾದ ಶ್ರೀ ಎಸ್. ನರಸಿಂಹ ಮೂರ್ತಿಯವರು ತಮ್ಮ ಭಾಷಣದಲ್ಲಿ, ಬಹುಮತ ಪಡೆದಿದ್ದ ಎನ್. ಟಿ. ರಾಮರಾವ್ ಅವರ ಸರ್ಕಾರವನ್ನು ಆಂಧ್ರ ಪ್ರದೇಶದ ರಾಜ್ಯ ಪಾಲರಾದ ರಾಮಲಾಲ್‌ರು ವಜಾಗೊಳಿಸಿದುದರಲ್ಲಿ ಪ್ರಧಾನಿ ಇಂದಿರಾ ಗಾಂಧಿಯ ಮತ್ತು ಅವರ ಪಕ್ಷದ ಹೈಕಮಾಂಡಿನ ಹಸ್ತಕ್ಷೇಪ ಇಲ್ಲ ಎಂಬ ತಡವಾಗಿ ಮುಂದೊಡ್ಡಿದ ವಾದವನ್ನು ನಂಬಲಾರದೆಂದೂ, ರಾಜ್ಯ ಪಾಲರ ಹುದ್ದೆಯ ಗೌರವವನ್ನು ಉಳಿಸಲು ರಾಜೀನಾಮೆ ನೀಡುವುದಾಗಿ ನಿರೀಕ್ಷಿಸಿದ ರಾಮಲಾಲರು ಆಂಧ್ರ ಪ್ರದೇಶದ ವಿದ್ಯಮಾನದಲ್ಲಿ ಸಂವಿಧಾನಕ್ಕೆ ವಿರುದ್ಧವಾಗಿ ನಡೆದುಕೊಂಡು ಪ್ರಮಾಣ ಭ್ರಷ್ಟರಾದರೆಂದೂ ಅಭಿಪ್ರಾಯ ಪಟ್ಟರು. ಚುನಾಯಿತ ಪ್ರತಿನಿಧಿಗಳು ಅಧಿಕಾರ ಮತ್ತು ಹಣದಾಸೆಗೆ ಬಲಿ ಬೀಳುತ್ತಿದ್ದು ಪಕ್ಷಾಂತರ ಮಾಡುತ್ತಿರುವುದಕ್ಕೂ ಭ್ರಷ್ಟಾಚಾರಕ್ಕಿಳಿಯುವುದಕ್ಕೂ ಶ್ರೀಯುತರು ತಮ್ಮ ತೀವ್ರ ವಿಷಾದ ವ್ಯಕ್ತ ಪಡಿಸಿದರು. ಜಮ್ಮು-ಕಾಶ್ಮೀರ ಮತ್ತು ಆಂಧ್ರ ಪ್ರದೇಶದ ವಿದ್ಯಮಾನಗಳಿಂದ ಪಾಠ ಕಲಿತು ಮುಂದಿನ ಚುನಾವಣೆಗಳಲ್ಲಾದರೂ ಸ್ವಾರ್ಥ ಸಾಧಕರನ್ನು ಭ್ರಷ್ಟಾಚಾರಿಗಳನ್ನು ರಾಜಕೀಯದಿಂದ ದೂರವಿಡುವಂತೆ ಜನರು ಜಾಗೃತರಾಗಬೇಕೆಂದೂ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಎತ್ತಿ ಹಿಡಿಯಬೇಕೆಂದೂ ಕರೆಯಿತ್ತರು.

ವಿಚಾರ ಸಂಕಿರಣದಲ್ಲಿ ಲಾಂ ಕಾಲೇಜು ವಿದ್ಯಾರ್ಥಿ ಶ್ರೀ ಕೆ. ಎಸ್. ಗೋಪಿನಾಥ್, ನ್ಯಾಯವಾದಿ ಶ್ರೀ ಡಿ. ಪಿ. ಒಡೆಯರ್, "ಸಮುದಾಯ" ಅಧ್ಯಕ್ಷ ಶ್ರೀ ಸಿ. ಆರ್. ಭಟ್, ಡಿ. ವಿ. ಎಸ್ ಕಾಲೇಜಿನ ಉಪನ್ಯಾಸಕ ಶ್ರೀ ಸತ್ಯನಾರಾಯಣ ಅಣತಿ ಮತ್ತು "ಪ್ರಜಾವಾಣಿ" ಪ್ರತಿನಿಧಿ ಶ್ರೀ ಜಿ. ಪಿ. ಬಸವ ರಾಜ್ ಭಾಗವಹಿಸಿದ್ದರು.

ರಾಜ್ಯಪಾಲರುಗಳ ಹುದ್ದೆಗೆ ಕೆಲವು ವಿಶಿಷ್ಟ ಅರ್ಹತೆ ಇರುವವರನ್ನೇ, ಸಕ್ರಿಯ ರಾಜಕೀಯದಲ್ಲಿ ಆಸಕ್ತರಾಗದಿರುವವರನ್ನೇ ನೇಮಿಸಬೇಕೆಂದೂ, ಸಂವಿಧಾನದಲ್ಲಿ ನಮೂದಿಸಿದ ಅವರ ಕರ್ತವ್ಯಗಳನ್ನು ನಿರ್ವಹಿಸಲು ನೀತಿ ಸಂಹಿತೆಯನ್ನು ರೂಪಿಸಬೇಕೆಂದೂ ಶ್ರೀ ಗೋಪಿನಾಥ್ ಅಭಿಪ್ರಾಯ ಪಟ್ಟರು.

ಕೇಂದ್ರ ಸರಕಾರ ರಾಜ್ಯ ಸರಕಾರಗಳನ್ನು ಉರುಳಿಸುವ ದುಷ್ಟ ಪರಂಪರೆ ಕೇರಳದಲ್ಲಿ 1959 ರಲ್ಲಿ ಶ್ರೀ ಇ. ಎಂ. ಎಸ್. ನಂಬೂದರಿ ಪಾಡ್‌ರ ಪ್ರಥಮ ಕಮ್ಯೂನಿಸ್ಟ್ ಸರಕಾರವನ್ನು ಉರುಳಿಸಿದಂದಿನಿಂದಲೇ ಪ್ರಾರಂಭವಾಗಿದೆ ಎಂದು ಶ್ರೀ ಒಡೆಯರ್ ನೆನಪಿಸಿದರು. ಸಿಕ್ಕಿಂ, ಜಮ್ಮು-ಕಾಶ್ಮೀರ ಮತ್ತು ಆಂಧ್ರ ಪ್ರದೇಶ ರಾಜ್ಯ ಸರಕಾರಗಳನ್ನು ಉರುಳಿಸಿದ ಇಂದಿರಾಗಾಂಧಿ ಕೇಂದ್ರ ಸರಕಾರ ತನ್ನ ವಕ್ರ ದೃಷ್ಟಿಯನ್ನು ಕರ್ನಾಟಕ, ಪ. ಬಂಗಾಳ, ತ್ರಿಪುರಾ ರಾಜ್ಯಗಳಲ್ಲಿನ ಕಾಂಗ್ರೆಯೇತರ ಸರಕಾರಗಳ ವಿರುದ್ಧವೂ ಹರಿಸೀತು ಎಂದು ಎಚ್ಚರಿಸಿದರು. ನಮ್ಮ ದೇಶದಲ್ಲಿ ವಿರೋಧ ಪಕ್ಷಗಳ ವಿರುದ್ಧ ಆಳುವ ಪಕ್ಷದ ಅಸಹನೆಯನ್ನು ಕಟುವಾಗಿ ಟೀಕಿಸಿ, ಸಂವಿಧಾನದೊಂದಿಗೇ ಪ್ರಜಾಪ್ರಭುತ್ವದ ಸತ್ ಪರಂಪರೆಯನ್ನೂ ಬೆಳೆಸಿಕೊಂಡು ಬರಬೇಕೆಂದೂ ತಿಳಿಸಿದರು.

ರಾಜ್ಯ ಸರಕಾರಗಳನ್ನು ಉರುಳಿಸುವ ಇತ್ತೀಚಿನ ವಿದ್ಯಮಾನಗಳನ್ನು ವಿಶ್ಲೇಷಿಸುತ್ತಾ, ಸರ್ವಾಧಿಕಾರ ಪ್ರವೃತ್ತಿಯ 1975-76 ರ ತುರ್ತು ಪರಿಸ್ಥಿತಿಯ ಕರಾಳ ಅನುಭವ ಮರುಕಳಿಸುತ್ತಿದೆ ಎಂದು ಶ್ರೀ ಬಸವರಾಜು ಎಚ್ಚರಿಸಿದರು. ಸ್ವಾತಂತ್ರ್ಯ, ಪ್ರಜಾಪ್ರಭುತ್ವಕ್ಕೆ ತೀವ್ರ ಅಪಾಯ ಉಂಟಾಗುತ್ತಿರುವಾಗ ಪ್ರತಿಯೊಬ್ಬ ನಾಗರಿಕನೂ ಅವುಗಳ ರಕ್ಷಣೆಗೆ ಮುಂದಾಗಬೇಕೆಂದು ಕರೆಯಿತ್ತರು.

ಶ್ರೀ ಅಣತಿಯವರು ಸಂವಿಧಾನದ ಧ್ಯೇಯೋದ್ದೇಶಗಳ ಕುರಿತು ಡಾ|| ಅಂಬೆಡ್ಕರ್ ಅವರ ಅಭಿಪ್ರಾಯಗಳನ್ನೂ, ರಾಜ್ಯಪಾಲರುಗಳ ಕಾರ್ಯನಿರ್ವಹಣೆಯ ಕುರಿತು ಅನೇಕ ತಜ್ಞರ ಅಭಿಪ್ರಾಯಗಳನ್ನೂ ನೆನಪಿಸಿದರು.

ಸದ್ಯದ ರಾಜಕೀಯ ಬಿಕ್ಕಟ್ಟಿಗೆ ಪ್ರಾಮಾಣಿಕತೆ, ನೀತಿ ನಿಷ್ಠೆ, ನಿಸ್ವಾರ್ಥ, ಜನಸೇವೆ, ಇತ್ಯಾದಿ ಮೌಲ್ಯಗಳ ಕೊರತೆಯೇ ಕಾರಣ ಎಂದರು.

ಕೇರಳದಿಂದ ಆಂಧ್ರ ಪ್ರದೇಶದವರೆಗೆ ಕಳೆದ ಕಾಲು ಶತಮಾನದಲ್ಲಿ ರಾಜ್ಯ ಸರಕಾರಗಳನ್ನು ಉರುಳಿಸುವ ದುಷ್ಟ ಪರಂಪರೆಗೆ ಕೇವಲ ಕೆಲವು ವ್ಯಕ್ತಿಗಳ ಗುಣಾವಗುಣಗಳೇ ಕಾರಣಗಳಾಗಿರದೆ, ಸ್ವಾತಂತ್ರ್ಯ ನಂತರದ ಗುತ್ತೇದಾರಿ ಬಂಡವಾಳಶಾಹಿ ನೇತೃತ್ವದ ಭೂಮಾಲಿಕ-ಬಂಡವಾಳ ಶಾಹಿ ಪ್ರಭುತ್ವದ ಅತಿ ಕೇಂದ್ರೀಕೃತ ಸಂವಿಧಾನವೇ ಮೂಲಭೂತ ಕಾರಣವಾಗಿದೆ ಎಂದು ಶ್ರೀ ಸಿ. ಆರ್. ಭಟ್ ಅಭಿಪ್ರಾಯಪಟ್ಟರು.

ಬಂಡವಾಳಶಾಹಿ ಆರ್ಥಿಕ ಅಭಿವೃದ್ಧಿಯಿಂದಾಗಿ ಸಂಪತ್ತಿನ ಕೇಂದ್ರೀಕರಣ, ನಿರುದ್ಯೋಗ, ಬಡತನ ಹೆಚ್ಚುತ್ತಿವೆ. ಆರ್ಥಿಕ ಬಿಕ್ಕಟ್ಟಿನಿಂದಾಗಿ ರಾಜಕೀಯ ಬಿಕ್ಕಟ್ಟೂ ತಲೆದೋರುತ್ತಿದೆ. ಜನಸಾಮಾನ್ಯರು-ದುಡಿಯುವ ಜನರು ತಮ್ಮ ಆರ್ಥಿಕ ಸ್ವಾತಂತ್ರ್ಯಕ್ಕಾಗಿ ಸಂಘಟಿತರಾಗಿ ಹೋರಾಡುವುದರ ಜೊತೆಗೇ ಪಂಚಾಯಿತಿನಿಂದ ಪಾರ್ಲಿಮೆಂಟಿನವರೆಗೆ ರಾಜಕೀಯದಲ್ಲಿಯೂ ತಮ್ಮ ಪ್ರಭಾವ ಬೀರುತ್ತಿದ್ದಾರೆ. ಪ್ರತಿಫಲವಾಗಿ ಅನೇಕ ರಾಜ್ಯಗಳಲ್ಲಿ ವಿರೋಧ ಪಕ್ಷಗಳು ಬಹುಮತ ಗಳಿಸಿ ಅಧಿಕಾರಕ್ಕೆ ಬರುವಂತಾಯಿತು. ಈ ರಾಜ್ಯ ಸರಕಾರಗಳು ಜನತೆಯ ಆಶೋತ್ತರಗಳನ್ನು ಈಡೇರಿಸಲು ಹೆಚ್ಚಿನ ಆರ್ಥಿಕ ಸಹಾಯ ಆಡಳಿತ ಸ್ವಾಯತ್ತತೆ ನೀಡುವುದಕ್ಕೂ, ಜನಪರ ಶಾಸನಗಳನ್ನು ಅಂಗೀಕರಿಸುವುದಕ್ಕೂ ಕೇಂದ್ರ ಸರಕಾರವನ್ನು ಒತ್ತಾಯಿಸಲಾರಂಭಿಸಿದವು. ಪರಿಣಾಮವಾಗಿ, ಕೇಂದ್ರ-ರಾಜ್ಯ ಸಂಬಂಧಗಳಲ್ಲಿ ತೀವ್ರ ಬಿಕ್ಕಟ್ಟು ಪ್ರಾರಂಭವಾಯಿತು ಎಂದು ವಿಶ್ಲೇಷಿಸಿದರು. ಗುತ್ತೇದಾರಿ ಬಂಡವಾಳಶಾಹಿ ನೇತೃತ್ವದ ಕೇಂದ್ರ ಸರಕಾರ ವಿರೋಧ ಪಕ್ಷಗಳ ರಾಜ್ಯ ಸರಕಾರಗಳನ್ನು ಸಹಿಸಲಾರದಾಯಿತು. ಒಂದಲ್ಲ ಒಂದು ಕಾರಣದಿಂದ ಅವುಗಳನ್ನು ಉರುಳಿಸುವ ಕ್ರಮ ಪ್ರಾರಂಭವಾಯಿತು. ಆರ್ಥಿಕ ಬಿಕ್ಕಟ್ಟು ಹೆಚ್ಚಿದಂತೆ ಆಳುವ ವರ್ಗ ಸಂಸದೀಯ ಪ್ರಜಾಪ್ರಭುತ್ವದ ಮುಖವಾಡವನ್ನು ಕಿತ್ತೊಗೆದು ಸರ್ವಾಧಿಕಾರವನ್ನು ಜನರ ಮೇಲೆ ಹೇರುವ ಪ್ರವೃತ್ತಿ ಭಾರತದಲ್ಲಿ ಮಾತ್ರವಲ್ಲ, ನೆರೆಯ ದೇಶಗಳಲ್ಲಿಯೂ, ಪಾಶ್ಚಾತ್ಯ ದೇಶಗಳಲ್ಲಿಯೂ ನಡೆದಿದೆ, ನಡೆಯುತ್ತಿದೆ ಎಂದರು.

ಪರಿಹಾರವಾಗಿ, ಕೇಂದ್ರದ ಸರ್ವಾಧಿಕಾರವನ್ನು ಕಡಿಮೆ ಮಾಡಿ, ರಾಜ್ಯಗಳ ಆಡಳಿತ, ಆರ್ಥಿಕ, ಶಾಸಕ ಸ್ವಾಯತ್ತತೆ ಹೆಚ್ಚಿಸುವ, ಜನಸಾಮಾನ್ಯರ ಮತ್ತವರ ಚುನಾಯಿತ ಪ್ರತಿನಿಧಿಗಳ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ರಕ್ಷಿಸುವ ಹಾಗೂ ಹೆಚ್ಚಿಸುವ ಕೆಲವು ತುರ್ತಿನ ತಿದ್ದುಪಡಿಗಳನ್ನು ಸಂವಿಧಾನದಲ್ಲಿ ಮಾಡಬೇಕೆಂದು ಶ್ರೀ ಭಟ್ ಸಲಹೆ ಮಾಡಿದರು.

★

ಅಸ್ಸಾಂ ಮತದಾರರ ಪಟ್ಟಿ — ಸಿಪಿಐ (ಎಂ) ನಿಲುಮೆ

ಅಸ್ಸಾಂನಲ್ಲಿಯ ಮತದಾರರ ಪಟ್ಟಿಯಲ್ಲಿ ಬಹಳಷ್ಟು ವಿದೇಶಿಯ ಹೆಸರು ದಾಖಲಾಗಿರುವುದರಿಂದ ಅವರಿಗೆ ಮತದಾನದ ಹಕ್ಕು ನೀಡಬಾರದು ಅವರನ್ನೆಲ್ಲ ರಾಜ್ಯ ಬಿಟ್ಟು ಹೊರಗೆ ಹಾಕಬೇಕೆಂದ ಪ್ರತಿಗಾಮಿಗಳು, ವಿಚ್ಛಿದ್ರಕಾರಿ ಶಕ್ತಿಗಳೂ ಕಳೆದ ಕೆಲವು ವರ್ಷಗಳಿಂದಲೂ ಚಳುವಳಿ ನಡೆಸುತ್ತ ಬಂದಿವೆ. 1983ರಲ್ಲಿ ಚುನಾವಣೆ ನಡೆದಾಗ ಕೆಲವು ಪಕ್ಷಗಳು, ಸಿ.ಪಿ.ಐ. ಸೇರಿ, ಸಿ.ಪಿ.ಐ.(ಎಂ) ಪಕ್ಷದ ನಿಲುಮೆಗೆ ಅಂದರೆ 1979ರ ಮತದಾರರ ಪಟ್ಟಿಯ ಆಧಾರವೇ ಕೊನೆಯದಾಗಿರಬೇಕೆಂಬ ಅಭಿಪ್ರಾಯಹೊಂದಿದ್ದವು. ಆದರೆ ಈಗ ಸಿ ಪಿ ಐ ಯು ನ್ನೊಳಗೊಂಡು ಎಲ್ಲ ವಿರೋಧಪಕ್ಷಗಳು 1971ರ ಮತದಾರರ ಯಾದಿಯೇ ಚುನಾವಣೆಗೆ ಆಧಾರವಾಗಿರಬೇಕೆಂಬ ನಿರ್ಣಯಕ್ಕೆ ಬಂದಿವೆ. ಕಾಂಗ್ರೆ ಕೂಡ 1979ರ ಯಾದಿಗೆ ಒಪ್ಪಿಕೊಂಡಿತ್ತು. ಮುಂಬರುವ ಲೋಕಸಭೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಅಲ್ಲಿಯ ಛಿದ್ರಕಾರಿ ಶಕ್ತಿಗಳೊಡನೆ ಒಡಂಬಡಿಕೆ ಮಾಡಿಕೊಳ್ಳುವ ಉದ್ದೇಶದಿಂದ 1971ರ ಮತದಾರರ ಯಾದಿಗೆ ಒಪ್ಪಿಗೆನೀಡುವ ಸಂಭವವಿದೆ. ಚುನಾವಣಾ ಆಯೋಗ ಕೂಡ ಅದೇ ನಿಲುಮೆ ತಾಳಿ, ಲಕ್ಷಾವಧಿ ಮತದಾರರಿಗೆ ಮತದಾನದ ಹಕ್ಕನ್ನು ನಿರಾಕರಿಸುವ ಸಂಭವವಿದೆ.

ಇದರ ಕುರಿತು ಸಿ.ಪಿ.ಐ.(ಎಂ) ಪ್ರಧಾನ ಕಾರ್ಯದರ್ಶಿ ಇ.ಎಂ.ಎಸ್. ನಂಬೂದಿರಿಪಾಡ್ ಅವರು ಚುನಾವಣಾ ಕಮಿಶನರಿಗೆ ಬರೆದ ಪತ್ರದ ಸಾರಾಂಶ ಈ ರೀತಿ ಇದೆ.

ಸಿ.ಪಿ.ಐ.(ಎಂ) ಅಸ್ಸಾಂ ರಾಜ್ಯ ಸಮಿತಿಯು 1979ರ ಬದಲಾಗಿ 1971ರ ಮತದಾರರ ಪಟ್ಟಿಯನ್ನು ಒಪ್ಪಿಕೊಳ್ಳುವುದಿಲ್ಲ ಯಾಕೆಂದರೆ ಹಾಗೆ ಮಾಡಿದರೆ 23ಲಕ್ಷದಷ್ಟು ಮತದಾರರ ಹೆಸರು ಕಡಿಮೆಯಾಗುತ್ತದೆ. ಅದು ಅಪಾಯಕಾರಿ ಚಿನ್ಹೆ. ಯಾವ ಕಾರಣವಿಲ್ಲದೆ, ಕೆಲವೇ ಜನರು ಅವರನ್ನು "ವಿದೇಶೀಗಳು" ಎಂದು ಹೇಳುವುದಕ್ಕೆ ಒಪ್ಪಿಕೊಂಡು, ಲಕ್ಷಾವಧಿ ಜನರ ಮತದಾನದ ಹಕ್ಕನ್ನು ನಿರಾಕರಿಸುವುದೆಂದರೆ ಭಾರತದ ನಾಗರೀಕನ ಮತದಾನದ ಹಕ್ಕಿಗೆ ಕೊಡಲಿಯೇಟು ಕೊಟ್ಟಂತಾಗುತ್ತದೆ. ಯಾವುದೇ ನ್ಯಾಯಾಂಗದೆದುರಿಗೆ ಇವರೆಲ್ಲ "ವಿದೇಶೀನಾಗರೀಕರು" ಎಂಬುದನ್ನು ಸಾಬೀತು ಮಾಡಿಲ್ಲ. ತಮ್ಮ ನಿಲುಮೆಯನ್ನು ತಿಳಿಸಲು ಈ ಮತದಾರರಿಗೆ ಅವಕಾಶ ನೀಡಿಲ್ಲ.

ಅಲ್ಪ ಭಾಷಿಕ, ಧರ್ಮ, ಮತೀಯರ ರಕ್ಷಕರೆಂದೂ, ಭಾರತದ ಐಕ್ಯತೆಯ ಸಂರಕ್ಷಣೆ ಮಾಡುವವರೆಂದೂ ಹೇಳುವವರೆಲ್ಲ ಈ ರೀತಿ ಏಕಪಕ್ಷೀಯವಾಗಿ ಲಕ್ಷಾವಧಿ ಜನರನ್ನು ಓಟಿನ ಅಧಿಕಾರದಿಂದ ತೆಗೆದು ಹಾಕಲು ಒಪ್ಪಿಗೆ ನೀಡಿರುವುದು ಆಶ್ಚರ್ಯಕರ. ಈ ನಿಲುಮೆಯನ್ನು, ಕೂಡಲೇ ತಡೆ ಹಿಡಿಯದಿದ್ದರೆ, ಸರ್ವರಿಗೂ ಮತದಾನದ ಹಕ್ಕಿರಬೇಕೆಂಬ ತತ್ವದ ಮೇಲೆ ಆಕ್ರಮಣ ಮಾಡುವುದಕ್ಕೆ ಹೆಚ್ಚೆಚ್ಚು ಪ್ರಾರಂಭವಾಗುವುದರಲ್ಲಿ ಸಂಶಯವಿಲ್ಲ. ಈ ಜಡ್ಡು ರಾಜ್ಯದಿಂದ ರಾಜ್ಯಕ್ಕೆ ಪ್ರಸರಿಸುವ ಸಂಭವವಿದೆ.

[ಆಗಸ್ಟ 25 ರಂದು ಮುಖ್ಯ ಚುನಾವಣಾಧಿಕಾರಿಗಳ ಜೊತೆಯಲ್ಲಿ ರಾಷ್ಟ್ರೀಯ ಪಕ್ಷಗಳ ಸಭೆ ಮುಗಿದ ನಂತರ ಇ.ಎಂ.ಎಸ್. ಅವರು ಹೊರಡಿಸಿದ ಪತ್ರಿಕಾ ಪ್ರಕಟಣೆ]

ಚುನಾವಣಾಧಿಕಾರಿಗಳು ಕರೆದ ರಾಷ್ಟ್ರೀಯ ಪಕ್ಷಗಳ ಸಭೆಯಲ್ಲಿ ಕೆಲವು ವಿರೋಧ ಪಕ್ಷಗಳು ಅಸ್ಸಾಂನಲ್ಲಿ ಅನುಸರಿಸತಕ್ಕ ನಿಲುಮೆಯ ಕುರಿತು ವ್ಯಕ್ತ ಮಾಡಿದ ಅಭಿಪ್ರಾಯ, ಒಪ್ಪಿಗೆಯನ್ನು ನೋಡಿ ನನಗೆ ಬಹಳ ಶೋಕವಾಗಿದೆ. ಯಾಕೆಂದರೆ ಆಳುವ ಪಕ್ಷ ಇತರ ರಾಜ್ಯಗಳಲ್ಲಿಯೂ ತನಗೆ ಬೇಕಾದಾಗ ಮತದಾರರ ಯಾದಿಯಲ್ಲಿ ತನ್ನ ಕೈಚಳಕ ತೋರಿಸಲು ಈ ನಿಲುಮೆ ಅನುಕೂಲ ಮಾಡಿಕೊಡುತ್ತದೆ.

ಈಗಿರುವ ಮತದಾರರ ಯಾದಿಯಲ್ಲಿ ವಿದೇಶೀಯರಿದ್ದರೆ, ಅವರನ್ನು ತೆಗೆದು ಹಾಕಬಹುದು, ಆದರೆ ಏಕ ಪಕ್ಷೀಯವಾಗಿ ಅಲ್ಲ. ಯಾರನ್ನು "ವಿದೇಶೀಯರು" ಎಂದು ಆರೋಪಿಸಲಾಗುತ್ತಿದೆಯೋ, ಅವರ ಹೆಸರಿಗೆ ತಕರಾರು ಮಾಡುವವರು ಅವರು ವಿದೇಶೀಯರೆಂಬುದನ್ನು ಪುರಾವೆ ಮಾಡಿ ತೋರಿಸಬೇಕಾಗಿರುವುದು ಅಗತ್ಯ. ಈಗಿನ ಸೂಚನೆ ಪ್ರಕಾರ ವಿದೇಶೀಯರೆಂಬುದನ್ನು ಯಾರೂ ಪುರಾವೆ ಮಾಡಿ ತೋರಿಸದಿದ್ದರೂ ಅಂಥ ಲಕ್ಷಾವಧಿ ಹೆಸರುಗಳನ್ನು ಮತದಾರರ ಯಾದಿಯಿಂದ ಕಡಿಮೆ ಮಾಡಲಾಗುವುದು. ಕೆಲವೇ ಜನರು ಇವರೆಲ್ಲ ವಿದೇಶೀಯರೆಂದು ಹೇಳಿದ ಮಾತ್ರಕ್ಕೆ ಲಕ್ಷಾವಧಿ ಜನರಿಗೆ ಮತದಾನದ ಹಕ್ಕು ನಿರಾಕರಿಸಲಾಗುತ್ತಿದೆ. ವಿರೋಧಿಸುವವರೇ ಪುರಾವೆ ಮಾಡಿ ತೋರಿಸಬೇಕೆಂಬ ತತ್ವದ ವಿರುದ್ಧವಾಗಿ ಆರೋಪಿಯೇ ತಾನು ನಿರಪರಾಧಿ ಎಂಬುದನ್ನು ಪುರಾವೆ ಮಾಡಿ ತೋರಿಸಬೇಕೆಂಬುದನ್ನು ಇದು ತೋರಿಸಿ ಕೊಡುತ್ತದೆ.

ಅಖಿಲ ಭಾರತ ಪ್ರತಿಭಟನಾ ದಿನಾಚರಣೆಯ ಮಹತ್ವ

— ಇ. ಎಂ. ಎಸ್. ನಂಬೂದಿರಿಪಾದ್

ದೇಶದಲ್ಲಿ ಪ್ರಜಾಪ್ರಭುತ್ವವನ್ನು ಉಳಿಸಲು ಆಗಸ್ಟ್ 25 ರಂದು ಭಾರತಾದ್ಯಂತ ಪ್ರತಿಭಟನಾ ದಿನವನ್ನಾಗಿ ಆಚರಿಸಲಾಯಿತು. ಹಲವಾರು ರಾಜ್ಯಗಳಲ್ಲಿ ಬಂದ್ ಆಚರಿಸಲಾಯಿತು. ಸಿಪಿಐ (ಎಂ) ಮತ್ತು ಎಡ ಪಕ್ಷಗಳು ಇದರಿಂದ ಅಭಿಮಾನ ಪಡಬಹುದು.

ರಾಷ್ಟ್ರೀಯ ಚಳುವಳಿ ಸಮಿತಿ ಹಾಗೂ ವಿರೋಧ ಪಕ್ಷಗಳ ಸಮನ್ವಯ ಸಮಿತಿಯು ಜನರಲ್ಲಿ ಆಳವಾಗಿ ಬೇರೂರಿ ಬಂದಿರುವ ಅಸಮಾಧಾನ, ಅವರಲ್ಲುಂಟಾಗಿರುವ ಹೋರಾಟದ ಪ್ರವೃತ್ತಿಯ ಸರಿಯಾದ ಅರ್ಥ ಮಾಡಿಕೊಂಡಿದ್ದರೆ ಆ ದಿವಸ ಭಾರತ್ ಬಂದ್ ಆಗಿ ಪರಿವರ್ತನೆ ಗೊಳ್ಳುತ್ತಿತ್ತು. ಪ. ಬಂಗಾಲ, ತ್ರಿಪುರ, ಕಾಶ್ಮೀರ ಮತ್ತು ದಕ್ಷಿಣದ ಐದು ರಾಜ್ಯಗಳಲ್ಲಿ ಸಂಪೂರ್ಣ ಬಂದ್ ಹಾಗೆಯೇ ದೇಶಾದ್ಯಂತ ನಡೆದ ಮತ ಪ್ರದರ್ಶನ ಸಭೆಗಳೆಲ್ಲ, ಏನು ತೋರಿಸುತ್ತವೆಂದರೆ ಸರ್ವಾಧಿಕಾರದ ವಿರುದ್ಧ ನಡೆಸುವ ಹೋರಾಟದಲ್ಲಿ ಸಂಘಟಿತ ಕಾರ್ಮಿಕ ವರ್ಗ ವಿರೋಧ ಪಕ್ಷಗಳ ಜೊತೆ ಸೇರಿಕೊಳ್ಳುತ್ತವೆ.

ಇಂಥ ಸ್ಫೂರ್ತಿದಾಯಕ ಬೆಳವಣಿಗೆಗಳು ಆಳುವ ಪಕ್ಷ ನಡೆಸುತ್ತಿರುವ "ವಿರೋಧ ಪಕ್ಷಗಳೆಲ್ಲ ಅಸ್ತವ್ಯಸ್ಥಗೊಂಡಿವೆ" "ಆಳುವ ಪಕ್ಷದ ನೈತಿಕ ಮಟ್ಟ ಮೇಲ್ಮಟ್ಟದಲ್ಲಿದೆ" ಎಂಬ ಆಳುವ ಪಕ್ಷದ ಹೇಳಿಕೆಯಲ್ಲಿ ಹುರುಳಿಲ್ಲೆಂಬುದನ್ನು ತೋರಿಸಿಕೊಟ್ಟಿವೆ ತಂತಮ್ಮೊಳಗೆ ಭಿನ್ನಾಭಿಪ್ರಾಯಗಳಿದ್ದರೂ ಕೂಡ ಕಾಂಗ್ರೆಸೇತರ ಸರಕಾರಗಳನ್ನುರುಳಿಸುವ ಇಂದಿರಾ ಕಾಂಗ್ರೆಸ್ಸನ್ನೆದುರಿಸುವಲ್ಲಿ ಎಲ್ಲರೂ ಏಕಾಭಿಪ್ರಾಯ ಹೊಂದಿದವರಾಗಿದ್ದಾರೆಂಬುದನ್ನು ಇದು ತೋರಿಸಿಕೊಟ್ಟಿದೆ.

ಯಾವದೇ ಕಾಂಗ್ರೆಯೇತರ ಸರಕಾರದ ವಿರುದ್ಧ ಕೇಂದ್ರ ಸರಕಾರವಾಗಲೀ, ಆಳುವ ಪಕ್ಷವಾಗಲೀ ಕೈ ಎತ್ತಿದರೆ ಎಲ್ಲರೂ ಒಗ್ಗಟ್ಟಾಗಿ ಅದನ್ನು ವಿರೋಧಿಸಬೇಕೆಂದು ಕಲ್ಕತ್ತದಲ್ಲಿ ಸೇರಿದ್ದ 17 ವಿರೋಧ ಪಕ್ಷಗಳ ಸಮಾವೇಶ ನಿರ್ಣಯ ಮಾಡಿತ್ತು. ಕಾಶ್ಮೀರದ ಫರೂಕ್ ಅಬ್ದುಲ್ಲಾ ಸರಕಾರವನ್ನು ಉರುಳಿಸಿದಾಗ, ಇತರ ವಿರೋಧ ಪಕ್ಷಗಳ ಜೊತೆಯಲ್ಲಿ ಲೋಕದಳ ಮತ್ತು ಬಿಜೆಪಿ ಸೇರಿ ಪ್ರತಿಭಟನೆ ವ್ಯಕ್ತ ಮಾಡಿ ಕಲ್ಕತ್ತ ಸಮಾವೇಶದ ನಿರ್ಣಯವನ್ನು ಪರೀಕ್ಷಿಸಲು ಸಾಧ್ಯವಾಯಿತು. ಬಿಜೆಪಿಯು ಫರೂಕ್ ಅಬ್ದುಲ್ಲಾ ಸರಕಾರದ ವಿರುದ್ಧ ಇದ್ದರೂ ಕೂಡ ಸರಕಾರವನ್ನುರುಳಿಸಿದ ರಾಜ್ಯಪಾಲರ ಕೃತಿಯನ್ನು ಖಂಡಿಸಲು ಮುಂದಾಯಿತು.

ಕಾಶ್ಮೀರ ಸರಕಾರವನ್ನು ಖಂಡಿಸಲು ದಿಲ್ಲಿಯಲ್ಲಿ ಜುಲೈ 11 ರಂದು ಸೇರಿದ್ದ ವಿರೋಧ ಪಕ್ಷಗಳ ಸಮಾವೇಶ ಮುಂದಿನ ಕ್ರಮಗಳನ್ನು ಕೈಗೊಳ್ಳುವುದರಲ್ಲಿ ಎಡವಿದೆ. ಇದರ ಬದಲಾಗಿ ಆಗಸ್ಟ್ ತಿಂಗಳಲ್ಲಿ ಆಂಧ್ರದ ರಾಜ್ಯಪಾಲರ ಕೃತಿಯನ್ನು ಖಂಡಿಸುವ ಸಂಯುಕ್ತ ಹೇಳಿಕೆಯ ನಂತರ ಮತ ಪ್ರದರ್ಶನ, ಧರಣಿಗಳನ್ನೊಳಗೊಂಡು ಹಲವಾರು ರಾಜ್ಯಗಳಲ್ಲಿ ಬಂದ್‌ಗಳಂತ ಅಖಿಲ ಭಾರತ ದಿನಾಚರಣೆಯಲ್ಲಿ ಪರ್ಯವಸಾನ ಗೊಂಡಿತು.

ಈ ಬೆಳವಣಿಗೆಗಳಿಂದಾಗಿ, ದಶವರ್ಷಗಳ ಹಿಂದಿನ ಪರಿಸ್ಥಿತಿಯ ಬೆಳವಣಿಗೆಗಳತ್ತ ನಮ್ಮ ದೇಶದ ರಾಜಕೀಯ ವಾತಾವರಣ ಸಾಗುತ್ತಿದೆಂಬ ಅಭಿಪ್ರಾಯ ರಾಜಕೀಯ ವರ್ತುಲಗಳಲ್ಲಿ ಮೂಡಿಬರುತ್ತಿರುವುದು ನಮ್ಮ ದೇಶದ ವೈಶಿಷ್ಟ್ಯವಾಗಿದೆ. 1970 ರ ಮಧ್ಯೆ ಭಾಗದಲ್ಲಿ ಪ್ರಾರಂಭವಾದ ಜೆ. ಪಿ. ಚಳುವಳಿಗೆ, ಅದರ ಪರಿಣಾಮವಾಗಿ 1977 ರಲ್ಲಿ "ಜನತಾ ಗಾಳಿ"ಯ ಮೂಲಕ 1977 ರ ಚುನಾವಣೆ ಹಾಗೂ ಆ ಚುನಾವಣೆಯಲ್ಲಿ ಕಾಂಗ್ರೆಸ ಪ್ರಥಮ ಸೋಲುಗಳಿಗೆಲ್ಲ ಈಗಿನ ವಾತಾವರಣವನ್ನು ಹೋಲಿಸಲಾಗುತ್ತಿದೆ. 1977 ರಲ್ಲಿ ಇಂದಿರಾ ಕಾಂಗ್ರೆಸ್ಸಿನ ಸೋಲಿಗೆ ಕಾರಣೀಭೂತವಾದ "ಎಲ್ಲ ವಿರೋಧ ಪಕ್ಷಗಳ ಐಕ್ಯತೆ" ಉಂಟಾಗುತ್ತದೆಂಬ ಅಭಿಪ್ರಾಯವನ್ನು ವಿರೋಧ ಪಕ್ಷಗಳಿಗೆ ಸಹಾನುಭೂತಿ ತೋರಿಸುವ ವ್ಯಾಖ್ಯಾನಗಾರರು ವ್ಯಕ್ತ ಮಾಡುತ್ತಿದ್ದಾರೆ. ಈ ಅಭಿಪ್ರಾಯದ ಬದಲಾಗಿ, ಆಳುವ ಪಕ್ಷವನ್ನು ಬೆಂಬಲಿಸುವವರೆಲ್ಲ "ಇಂದಿರಾ ಸರಕಾರವನ್ನು ಕೆಳಗಿಳಿಸುವ ಒಂದೇ ಉದ್ದೇಶದಿಂದ ವಿರೋಧ ಪಕ್ಷಗಳಲ್ಲಿಯ ಬಲ ಮತ್ತು ಎಡ ಪಕ್ಷಗಳೆಲ್ಲ ಸಂದರ್ಭ ಸಾಧಕ ಒಪ್ಪಂದ ಮಾಡಿಕೊಳ್ಳುತ್ತಿದ್ದಾರೆಂದು ಖಂಡಿಸುತ್ತಿದ್ದಾರೆ. ಮುಂಬರುವ ಚುನಾವಣೆಗೆ ನೇರವಾದ ಸಂಬಂಧ ಕಲ್ಪಿಸುವುದನ್ನು ಬಿಟ್ಟು ಬೇರೆ ಯಾವ ಪ್ರಶ್ನೆಯ ಕುರಿತಾಗಲೀ ವಿರೋಧ ಪಕ್ಷಗಳು ಒಟ್ಟಿಗೆ ಸೇರಲು ಸಾಧ್ಯವಿದೆಂದು ವಿಚಾರ ಕೂಡ ಅವರ್ಯಾರಿಗೂ ಹೊಳೆಯುವದಿಲ್ಲ.

ಅತಿ ಶೀಘ್ರದಲ್ಲೇ ಮುಂಬರುವ ಚುನಾವಣೆ ರಾಜಕೀಯ ಹೋರಾಟದಲ್ಲಿ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳನ್ನು ಒಗ್ಗೂಡಿಸಲು ಸಹಾಯಕವಾಗಿದ್ದರೂ ಕೂಡ, ಅದು ಹೋರಾಡುತ್ತಿರುವ ಎಲ್ಲಾ ಜನರ ಐಕ್ಯತೆ ಸಾಧಿಸುವ ವಿಶಾಲವಾದ ಚಳುವಳಿಯ ಒಂದು ಅಂಗವೆಂಬುದನ್ನು ನಾವು ಸ್ಪಷ್ಟವಾಗಿ ತಿಳಿದುಕೊಳ್ಳಬೇಕು. ಜಲಂಧರದಲ್ಲಿ ಸೇರಿದ್ದ ಪಕ್ಷದ ಅಧಿವೇಶನದ (ಇದನ್ನೇ ವಿಜಯವಾಡ ನಿರ್ಣಯದಲ್ಲಿಯೂ ಪುನರುಚ್ಚರಿಸಲಾಗಿದೆ) ರಾಜಕೀಯ ನಿರ್ಣಯ 'ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ರಂಗ ಬರೀ ಚುನಾವಣೆ ಹಾಗೂ ಮಂತ್ರಿ ಮಂಡಳಕ್ಕಾಗಿ ಮಾತ್ರ ಸೀಮಿತಗೊಂಡಿದೆಂದು ತಿಳಿಯಬಾರದು. ಆರ್ಥಿಕ ಪರಿಸ್ಥಿತಿಯನ್ನು ತನ್ನ ಹಿಡಿತದಲ್ಲಿಟ್ಟುಕೊಂಡಿರುವ ಪ್ರತಿಗಾಮಿ ವರ್ಗವನ್ನು ಪ್ರತ್ಯೇಕಿಸಲು, ಆರ್ಥಿಕ-ರಾಜಕೀಯ ರಂಗದಲ್ಲಿ ತುರ್ತಿನ ಮುನ್ನಡೆ ಸಾಧಿಸಲಿಕ್ಕೆ ಶಕ್ತಿಗಳ ಹೋರಾಟದ ಒಕ್ಕೂಟವೆಂದು ಅರ್ಥ ಮಾಡಿಕೊಳ್ಳಬೇಕೆಂದು" ಹೇಳಿದೆ.

ತುರ್ತಿನ ಮಹತ್ವದ ಸಮಸ್ಯೆಗಳನ್ನು ಚರ್ಚೆ ಮಾಡಲು ಸೇರಿದ್ದ ವಿಜಯವಾಡ, ದಿಲ್ಲಿ, ಶ್ರೀನಗರ ಮತ್ತು ಕಲ್ಕತ್ತಗಳ ಅಖಿಲ ಭಾರತ ಸಮಾವೇಶಗಳ ನಮ್ಮ ಪಕ್ಷ ಊಹಿಸಿದಂತೆ ಜನರ ಐಕ್ಯತೆ ಉಂಟು ಮಾಡುವ ಉದ್ದೇಶವನ್ನು ಸಾಧಿಸಿದೆ. ಲೋಕದಳ ಮತ್ತು ಬಿ. ಜೆ. ಪಿ. ಯ ರಾಷ್ಟ್ರೀಯ ಪ್ರಜಾ ಪ್ರಭುತ್ವ ಒಕ್ಕೂಟ (ಎನ್. ಡಿ. ಎ.) ಒಂದು ಕಡೆ, ಜನತಾದ ಮುಂದಾಳದಲ್ಲಿಯ ಸಂಯುಕ್ತ ರಂಗ (ಯು. ಎಫ್.) ಮತ್ತೊಂದೆಡೆ ಹೀಗೆ ಎರಡು ಚುನಾವಣಾ ರಂಗಗಳು ಅಸ್ತಿತ್ವಕ್ಕೆ ಬಂದಾಗ ಅದರ ಜೊತೆಯಲ್ಲಿಯೇ ಈ ಎರಡೂ ಗುಂಪುಗಳಿಂದ ಪ್ರತ್ಯೇಕವಾಗಿದ್ದು ಸಂಯುಕ್ತ ರಂಗಕ್ಕೆ ವಿಶಾಲ ಬೆಂಬಲ ನೀಡುವ ಎಡ ಪಕ್ಷಗಳ ನಿಲುವೆಯು, ಬೇರೆ ಬೇರೆ ಕಡೆಗಳಲ್ಲಿ ನಡೆದ ಸಮಾವೇಶಗಳೆಲ್ಲ ಚುನಾವಣಾ ಹೊಂದಾಣಿಕೆಯ ಪ್ರಾರಂಭವೆಂದು "ವಿವರ ನೀಡಿದ" ರಾಜಕೀಯ ವಿಶ್ಲೇಷಕರ ನಿಲುವು ಸರಿಯಲ್ಲೆಂಬುದನ್ನು ತೋರ್ಪಡಿಸಿದೆ.

ಚುನಾವಣೆಯನ್ನೆದುರಿಸುವ ಸಲುವಾಗಿ ಭದ್ರವಾದ ಒಪ್ಪಂದ ಸಾಧಿಸಲು ಈ ಎರಡೂ ಗುಂಪುಗಳು ವಿಫಲವಾದಾಗ ಅದೇ ಸಮಯದಲ್ಲಿ ಈ ಎರಡು ಗುಂಪುಗಳಲ್ಲಿ ಹಲವಾರು ಸಮಸ್ಯೆಗಳು ಹುಟ್ಟಿಕೊಂಡಾಗ ಆಳುವ ಪಕ್ಷದ ಮುಖಂಡರೆಲ್ಲ ವಿರೋಧ ಪಕ್ಷಗಳೆಲ್ಲಾ ಅಸ್ತವ್ಯಸ್ತಗೊಂಡಿವೆಂಬ ಅಭಿಪ್ರಾಯಕ್ಕೆ ಬರುವಂತೆ ಮಾಡಿತು. ಆಳುವ ಪಕ್ಷಕ್ಕೆ ಸುಲಭವಾಗಿಯೇ ಚುನಾವಣೆಯ ವಿಜಯ ಒದಗಿಸುತ್ತಾರೆಂಬ ಅಭಿಪ್ರಾಯ ವಿರೋಧ ಪಕ್ಷಗಳ ಬೆಂಬಲಿಗರಲ್ಲಿ ಉಂಟಾಗಿ ಅವರೆಲ್ಲ ನಿರಾಶೆಗೊಳ್ಳುವಂತಾಗಿದೆ.

ಕಾಂಗ್ರೆಯಲ್ಲಿ ಆತ್ಮ ವಿಶ್ವಾಸ ಮತ್ತು ಗೆಲುವಿನ ಭಾವನೆ ಹಾಗೆಯೇ ವಿರೋಧ ಗುಂಪಿನಲ್ಲಿ ನಿರಾಶೆಗಳಂತ ವ್ಯಕ್ತಿಗತ ಭಾವನೆಗಳೆಲ್ಲ, ಕಾಶ್ಮೀರ ಮತ್ತು ಆಂಧ್ರ ಸರಕಾರಗಳನ್ನು ಉರುಳಿಸಿದ್ದರ ವಿರುದ್ಧ ಸಾಧಿಸಿದ ವಿರೋಧ ಪಕ್ಷಗಳ ಐಕ್ಯತೆಯಿಂದಾಗಿ ದೂರವಾಗುವಂತಾಗಿದೆ. ಹಾಗೆಯೇ ಇವುಗಳಿಂದಾಗಿ 1977 ರಂತೆ ಚುನಾವಣೆ ಹೊಂದಾಣಿಕೆಸಾಧ್ಯವೆಂಬ ಭಾವನೆಯೂ ಸೀರು ಗುಳ್ಳೆಯಂತಾಗಿದೆ. ಈಗಿರುವ ದೇಶದ ರಾಜಕೀಯ ಪರಿಸ್ಥಿತಿ ಜೆ. ಪಿ. ಚಳುವಳಿಯ ಅನಂತರ "ಜನತಾ ಅಲೆಗಳ" ದಿನಗಳಿಗಿಂತ ಗುಣ ಮಟ್ಟದಲ್ಲಿ ಪ್ರತ್ಯೇಕವಾಗಿದೆಂಬುದನ್ನು ಯಾವುದೇ ವಿಚಾರವಾದಿ ಪರಿಶೀಲಕ ತಿಳಿದು ಕೊಳ್ಳಬಹುದಾಗಿದೆ. ಜನತಾ ಸರಕಾರದ ಉದಯ ಹಾಗೂ ಅಸ್ತ; ಜನತಾ ಸರಕಾರ ಬಿದ್ದ ನಂತರ ಸಣ್ಣ ಗುಂಪುಗಳ ರಚನೆ, ಏಳು ಮತ್ತು ಆರು ವರ್ಷಗಳವರೆಗೆ ಸತತವಾಗಿ ಪಶ್ಚಿಮ ಬಂಗಾಲ ಮತ್ತು ತ್ರಿಪುರಾಗಳ ಎಡ ರಂಗ ಸರಕಾರಗಳ ಮುಂದುವರಿಕೆ, ಕೇರಳ, ತಮಿಳುನಾಡು, ಆಂಧ್ರ, ಕರ್ನಾಟಕಗಳಲ್ಲಿಯ ಬೆಳವಣಿಗೆ ಮೊದಲಾದವುಗಳೆಲ್ಲ ಒಂದು ವಿಷಯವನ್ನು ಸ್ಪಷ್ಟಪಡಿಸಿವೆ ಅದೇನೆಂದರೆ ಇಡೀ ವಿರೋಧ ಪಕ್ಷಗಳಲ್ಲಿ ಬಲ, ಎಡ ಮತ್ತು ಕೇಂದ್ರಿಯ ಗುಪುಗಳಾಗಿ ವಿಂಗಡಿಸಲ್ಪಟ್ಟಿದ್ದರೂ ಕೂಡ, ಅವುಗಳೆಲ್ಲ ಒಟ್ಟಾಗಿಯೇ ಕಾರ್ಯಮಾಡಬಲ್ಲವು ಮತ್ತು ಕಾಂಗ್ರೆಸ ಸರ್ವಾಧಿಕಾರವನ್ನು ಎದುರಿಸಬಲ್ಲವೆಂಬುವನ್ನು ತೋರ್ಪಡಿಸಿವೆ. ಚುನಾವಣೆಯನ್ನೆದುರಿಸಲಿಕ್ಕೆ "ಎಲ್ಲ ವಿರೋಧಪಕ್ಷಗಳ ಐಕ್ಯತೆ" ಎಂದು ವಿಚಾರಮಾಡುವುದು ಸರಿಯಲ್ಲ, ಅದೇ ಸಮಯದಲ್ಲಿ ಆಗಸ್ಟ್ 25ರ ಭಾರತ ಮಟ್ಟದ ಪ್ರತಿಭಟನಾ ದಿನಾಚರಣೆಯಂತೆ, ಬೇರೆ ಬೇರೆ ಸಮಸ್ಯೆಗಳಿಗೆ ಎಲ್ಲ ವಿರೋಧ ಪಕ್ಷಗಳು ಒಂದಾಗುವ ಸಂಭವವನ್ನು ಅಲ್ಲಗಳೆಯುವಂತಿಲ್ಲ. ಆಗಸ್ಟ್ 25 ರಂದು ಕಂಡಂತೆ, ಆ ರೀತಿ ಒಟ್ಟಾಗುವುದರಿಂದ ವಿಶಾಲ ಜನಸ್ತೋಮವನ್ನು ಚಳುವಳಿಗಿಳಿಸಲು ಸಾಧ್ಯವಾಗುತ್ತದೆ.

(8ನೇ ಪುಟ ನೋಡಿ)

ತ್ರಿಪುರಾದಲ್ಲಿ ಸೈನ್ಯ

ತ್ರಿಪುರಾದಲ್ಲಿ ಇತ್ತೀಚೆಗೆ ತೀವ್ರಗತಿಯಲ್ಲಿ ವರ್ಧಿಸುತ್ತಿರುವ ತೀವ್ರಗಾಮಿಗಳ ಚಟುವಟಿಕೆಗಳು ರಾಜ್ಯದ ಸಿ ಪಿ. ಐ. (ಎಂ) ನೇತೃತ್ವದ ಎಡರಂಗ ಸರಕಾರದ ಭದ್ರತೆಗೆ ಎಂಥತಹ ಅಪಾಯ ಒದಗಿದೆ ಎಂಬುದನ್ನ ಊಹಿಸಿಕೊಳ್ಳಲು ಸಹಾಯಕವಾಗಿದೆ. ತ್ರಿಪುರಾದ ಕಾಂಗ್ರೆಸ' (ಐ) ಅಧ್ಯಕ್ಷ ಅಶೋಕ ಭಟ್ಟಾಚಾರ್ಜಿ ಪ್ರತಿಯೊಂದು ಘಟನೆಯ ನಂತರವೂ, ಪತ್ರಿಕಾ ಹೇಳಿಕೆ ನೀಡುತ್ತಾ ತ್ರಿಪುರಾ ರಾಜ್ಯವನ್ನು "ಗಲಭೆ ಪೀಡಿತ ಪ್ರದೇಶ"ಗಳ ವ್ಯಾಪ್ತಿಗೆ ಸೇರಿಸಿ ಸೈನ್ಯವನ್ನು ಕಳಿಸಬೇಕೆಂದು ಮತ್ತು ರಾಷ್ಟ್ರಪತಿ ಆಡಳಿತವನ್ನು ಜ್ಯಾರಿಗೊಳಿಸಬೇಕೆಂದು ಕೇಂದ್ರ ಸರ್ಕಾರವನ್ನು ಒತ್ತಾಯಿಸುತ್ತಿದ್ದಾರೆ. ಇದು ಹೊಸತೇನೂ ಅಲ್ಲ. ಅಥವಾ ಅನಿರೀಕ್ಷಿತವೂ ಅಲ್ಲ. ಇದು ಇಂದಿರಾಗಾಂಧಿ ಪಕ್ಷದ ನಿಜವಾದ ಮುಖವನ್ನು ಬಯಲಿಗಿಡುತ್ತದೆ.

ತ್ರಿಪುರಾ ನ್ಯಾಶನಲ್ ವಾಲಂಟಿಯರ್ಸ್ ಎಂಬ ಹದಿನಯಸ್ಕರ ಸಶಸ್ತ್ರ ಗುಂಪಿಗೆ ಲಾಲ್ಡೆಂಗಾನ ವಿಚ್ಛಿದ್ರಕಾರೀ ಮಿಜೋನ್ಯಾಶನಲ್ ಫ್ರಂಟ್ ಬಾಂಗ್ಲಾ ದೇಶದಲ್ಲಿ ತರಬೇತಿ ನೀಡಿ ಅವರನ್ನು ಧಾಳಿ ನಡೆಸಲು, ಲೂಟಿ, ಕೊಲೆ ಹಾಗೂ ಅಪಹರಣಗಳನ್ನು ನಡೆಸಲು ತ್ರಿಪುರಾಗೆ ಕಳಿಸುವ ಉದ್ದೇಶವಾದರೂ ಏನು ?

ತ್ರಿಪುರಾದಲ್ಲಿ ಇತ್ತೀಚೆಗೆ ನಡೆದ ಪಂಚಾಯತ್ ಚುನಾವಣೆಗಳಲ್ಲಿ ಕಾಂಗ್ರೆ ಪಕ್ಷವು ಶೇ. 14 ಮತಗಳನ್ನು ಗಳಿಸಿತು. ತ್ರಿಪುರಾ ಉಪಜಾತಿ ಜುಬಾ ಸಮಿತಿ ಶೇ. 8 ಮತಗಳನ್ನು ಗಳಿಸಿತು. ಸಿ.ಪಿ.ಐ (ಎಂ) ಮತ್ತು ಅದರ ಮಿತ್ರ ಪಕ್ಷಗಳು ಶೇ. ,0 ಮತಗಳನ್ನು ಗಳಿಸಿಕೊಂಡಿತು. ಇದರಲ್ಲಿ ಸಿ.ಪಿ ಐ. (ಎಂ) ಒಂದೇ ಶೇ 66 ಮತಗಳನ್ನು ಗಳಿಸಿತು. ತ್ರಿಪುರಾದಲ್ಲಿ ನಡೆಯುತ್ತಿರುವ ಕೊಲೆಗಳು ಮತ್ತು ಭಯೋತ್ಪಾದಕತೆಯ ವಿರುದ್ಧ ಮತ ನೀಡಿದ ಜನತೆ ಎಡರಂಗದ ಮೇಲೆ ತನ್ನ ಗಾಢವಾದ ವಿಶ್ವಾಸವನ್ನು ವ್ಯಕ್ತಪಡಿಸಿತು

ಆದರೂ ಕೂಡ ಸಿಕ್ಕಿಂ, ಕಾಶ್ಮೀರ, ಆಂಧ್ರಗಳಂತೆಯೇ ತ್ರಿಪುರಾದ ಎಡ ರಂಗ ಸರಕಾರವನ್ನು ಉರುಳಿಸುವ ಒಳಸಂಚಿನಿಂದಲೇ ತ್ರಿಪುರಾದ ಒಂದು ಭಾಗಗಳನ್ನು "ಗಲಭೆ ಪೀಡಿತ ಪ್ರದೇಶ" ಗಳೆಂದು ಸಾರಿ ಅಲ್ಲಿ ಸೈನಿಕ ನೆಲೆ ಸ್ಥಾಪಿಸುವ ಕೇಂದ್ರ ಸರಕಾರದ ನಿಲುವೆಯನ್ನು ತ್ರಿಪುರಾದ ಮುಖ್ಯಮಂತ್ರಿ ನೃಪೇನ್ ಚಕ್ರವರ್ತಿಯವರು ಖಂಡಿಸಿ, ಶಾಂತಿ ಪಾಲನೆಯ ಕರ್ತವ್ಯ ನಿರ್ವಹಿಸಲು ಎಡರಂಗ ಸರಕಾರ ಸಮರ್ಥವಾಗಿದೆಂದು ಇಂದಿರಾ ಗಾಂಧಿಯವರಿಗೆ ತಿಳಿಸಿದ್ದಾರೆ.

— ಬಿ. ಟಿ. ರಣದಿವೆ

ಮಾರ್ಕ್ಸ್‌ವಾದ ಮತ್ತು ಭಾರತದಲ್ಲಿ ರಾಷ್ಟ್ರೀಯತೆಯ ಪ್ರಶ್ನೆ | 3

ಪ್ರಜಾಪ್ರಭುತ್ವ ಮತ್ತು ಭಾಷಾ ಸಮಾನತೆ

ದೇಶದ ಪ್ರಸ್ತುತ ಸನ್ನಿವೇಶದಲ್ಲಿ ಬಹಳ ಮಹತ್ತ್ವ ಹೊಂದಿರುವ ರಾಷ್ಟ್ರ ಮತ್ತು ರಾಷ್ಟ್ರೀಯತೆಯ ಮಾರ್ಕ್ಸ್‌ವಾದಿ—ಲೆನಿನ್‌ವಾದಿ ವಿಶ್ಲೇಷಣೆ ನಡೆಸಿರುವ ಕಾ. ಬಿ. ಟಿ. ರಣದಿವೆ ಯವರ "Marxism and the Nationality Question in india" ಲೇಖನದ ಕನ್ನಡ ಅನುವಾದವನ್ನು "ಐಕ್ಯರಂಗ" ಪ್ರಕಟಿಸುತ್ತಿದೆ.

ಇದುವರೆಗೆ ಪ್ರಕಟವಾದ ಭಾಗಗಳಲ್ಲಿ ಈ ಸಮಸ್ಯೆಯ ಬಗ್ಗೆ ಮಾರ್ಕ್ಸ್, ಎಂಗೆಲ್ಸ್, ಲೆನಿನ್ ಮತ್ತು ಸ್ಟಾಲಿನ್ನರ ವಿಶ್ಲೇಷಣೆಗಳ ಸಂಕ್ಷಿಪ್ತ ವಿವರಣೆ, ನವ ವಿಮೋಚಿತ ದೇಶವಾದ ಭಾರತದಲ್ಲಿ ರಾಷ್ಟ್ರೀಯತಾ ಸಮಸ್ಯೆಯ ಸ್ವರೂಪ ಮತ್ತು ಇದನ್ನು ಎದುರಿಸುವಲ್ಲಿ ಇತರ ವರ್ಗಗಳ ದೌರ್ಬಲ್ಯ ಹಾಗೂ ಕಾರ್ಮಿಕ ವರ್ಗದ ವಿಶಿಷ್ಟ ಪಾತ್ರದ ವಿಶ್ಲೇಷಣೆಯಿತ್ತು.

ಪ್ರಸ್ತುತ ಭಾಗದಲ್ಲಿ ಭಾರತದ ರಾಷ್ಟ್ರೀಯತಾ ಸಮಸ್ಯೆಯ, ಪ್ರಚಲಿತ ಮಾತುಗಳಲ್ಲಿ ಹೇಳುವುದಾದರೆ, ಭಾಷಾ ಸಮಸ್ಯೆಯ ವಿವಿಧ ಆಯಾಮಗಳನ್ನು ಚರ್ಚಿಸಲಾಗಿದೆ.

ಕೇವಲ ಸಾಮ್ರಾಜ್ಯಶಾಹಿಯನ್ನು ಹೊಡೆದೋಡಿಸುವುದರಿಂದ ಮಾತ್ರವೇ ಆಧುನಿಕ ಕಾಲದ ಒಂದು ರಾಷ್ಟ್ರೀಯ ಬಂಡವಾಳಶಾಹೀ ಪ್ರಭುತ್ವಕ್ಕೆ ಅಗತ್ಯವಾದ ಐಕ್ಯತೆ ಸಾಧಿಸುವುದು ಸಾಧ್ಯವಿಲ್ಲ ಎಂಬುದು ಸ್ಪಷ್ಟ. ಅದನ್ನು ಸಾಧಿಸಬೇಕಾದರೆ ಬಂಡವಾಳಶಾಹೀ-ಪೂರ್ವ ತತ್ತ್ವವಿಚಾರಗಳ, ಸಂಸ್ಥೆಗಳ, ಸಾಮಾಜಿಕ ಸಂಬಂಧಗಳ ವಿರುದ್ಧ ಹೋರಾಡಿ ಅವನ್ನು ನಿವಾರಿಸಬೇಕು; ಅಂದರೆ ಕೃಷಿಕ ಕ್ರಾಂತಿಯನ್ನು ಪೂರ್ಣಗೊಳಿಸಬೇಕು.

ಇದರೊಂದಿಗೇ ಈ ಹೊಸ ಪ್ರಭುತ್ವದ ಆಧುನಿಕ ಘಟಕಗಳ ನಡುವೆ ಸಮಾನತೆಯ ಸಮಸ್ಯೆಯು ಎದ್ದೇಳುತ್ತದೆ. ಈ ಸಮಸ್ಯೆ ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ಎಲ್ಲಾ ರಾಜ್ಯಗಳ ಜನತೆ ಜಾಗೃತಗೊಂಡಾಗಲೆಲ್ಲಾ ಉದ್ಭವಗೊಳ್ಳುತ್ತಿತ್ತು. ಇದು ಹೊಸ ಪ್ರಭುತ್ವವೊಂದರ ಎಲ್ಲಾ ಭಾಷಾ, ರಾಷ್ಟ್ರೀಯ ಹಾಗೂ ಬುಡಕಟ್ಟು ಘಟಕಗಳ ನಡುವೆ ಸಮಾನತೆಯಿರುವಂತೆ ನೋಡಿಕೊಳ್ಳುವ, ಅವುಗಳ ನಡುವಿನ ಆಧುನಿಕ ಅಥವಾ ಪಾರಂಪರಿಕ ಅಸಮಾನತೆಯನ್ನು ತೊಲಗಿಸುವ ಒಂದು ಆಧುನಿಕ ಸಮಸ್ಯೆಯಾಗಿತ್ತು. ಈ ಸಮಸ್ಯೆಯನ್ನು ಭಾರತೀಯ ಪ್ರಜಾಪ್ರಭುತ್ವದ ಒಂದು ಸಮಸ್ಯೆಯೆಂದು ಕಾಣುವಲ್ಲಿ ಏಕರಾಷ್ಟ್ರದ ಸಿದ್ಧಾಂತದ ಪ್ರತಿಪಾದಕರು ವಿಫಲರಾದರು. ಅದರಲ್ಲಿ ವಿಚ್ಛಿದ್ರಕಾರೀ ಪ್ರವೃತ್ತಿಯ ವಾಸನೆಯಷ್ಟೇ ಅವರಿಗೆ ಬಂದಿತ್ತು. ಆದರೂ ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ಈ ಹೊಸ ಶಕ್ತಿಗಳಿಗೆ ರಿಯಾಯ್ತಿ ನೀಡಬೇಕಾಗಿ ಬಂತು. ಭಾಷಾ ರಾಷ್ಟ್ರೀಯ ಘಟಕಗಳ ಪ್ರತ್ಯೇಕ ಅಸ್ತಿತ್ವವನ್ನು ಮಾನ್ಯಮಾಡಲು ನಿರಾಕರಿಸಿದವರು ಸಂವಿಧಾನ ಸಭೆಯಲ್ಲಿ ಅತ್ಯಂತ ದೊಡ್ಡ ಸೋಲನ್ನು ಅನುಭವಿಸಬೇಕಾಯಿತು. ಹಿಂದಿಯನ್ನು ಹೊಸ ಪ್ರಭುತ್ವದ ಅಧಿಕೃತ ಭಾಷೆಯಾಗಿ ಅಳವಡಿಸುವುದು ಆ ಸಭೆಗೆ ಸಾಧ್ಯವಾಗಲಿಲ್ಲ. ನಮ್ಮ ಬಹು-ರಾಷ್ಟ್ರೀಯ ಪ್ರಭುತ್ವ ಉಳಿದ ಭಾಷೆಗಳಿಗೆ ಅಡಿಯಾಳು ಸ್ಥಾನಮಾನವನ್ನು ಒಪ್ಪಿಕೊಳ್ಳಲು ನಿರಾಕರಿಸಿತು. ಒಂದು ಭಾಷೆಗೆ ರಾಷ್ಟ್ರಭಾಷೆಯ ಸ್ಥಾನಮಾನವನ್ನು ನೀಡಲು ಅದು ನಿರಾಕರಿಸಿತು. ಅಂದಿನಿಂದ ಕೇಂದ್ರದ ಪ್ರಾಬಲ್ಯದ ವಿರುದ್ಧ ಹೋರಾಟ ಒಂದಲ್ಲ ಒಂದು ರೂಪದಲ್ಲಿ ಹಿಂದಿಯನ್ನು ಹೇರಿಸುವುದಕ್ಕೆ ವಿರೋಧದ ಸ್ವರೂಪ ತಳೆದಿದೆ.

ಭಾರತೀಯ ಸನ್ನಿವೇಶ

ಭಾರತದಲ್ಲಿ ರಾಷ್ಟ್ರೀಯತಾ ಸಮಸ್ಯೆಯನ್ನು ಪರಿಹರಿಸುವ ಮೂರ್ತ ಪ್ರಸ್ತಾಪಗಳು ಮತ್ತು ಘೋಷಣೆಗಳನ್ನು ದೇಶದ ಮೂರ್ತ ಸನ್ನಿವೇಶವೇ ನಿರ್ಧರಿಸುತ್ತದೆ. ಈ ಸನ್ನಿವೇಶ ಲೆನಿನ್ ರಾಷ್ಟ್ರೀಯ ಗುಂಪುಗಳ ಸ್ವಯಂ-ನಿರ್ಧಾರದ ಹಕ್ಕನ್ನು ಪ್ರತಿಪಾದಿಸಿದಾಗ ರಶ್ಯಾದಲ್ಲಿದ್ದ ಸನ್ನಿವೇಶಕ್ಕಿಂತ ಸಂಪೂರ್ಣ ಭಿನ್ನವಾಗಿದೆ.

"ರಾಷ್ಟ್ರೀಯ ಪ್ರಶ್ನೆಯ ಕುರಿತಾದ ಟಿಪ್ಪಣಿ"ಯಲ್ಲಿ ಹೇಳಿರುವಂತೆ— ವಿಭಿನ್ನ ಭಾಷಾ ಅಥವಾ ಉಪ-ರಾಷ್ಟ್ರೀಯ ಪ್ರವಾಹಗಳು ಹಾಗೂ ಆರ್ಥಿಕ ಮುನ್ನಡೆಗಾಗಿ ಅವುಗಳ ಹೋರಾಟ ಭಾರತ ಸಂಘದೊಳಗಿರುವ ಯಾವುದೇ ಒಂದು ದಮನಕಾರೀ ರಾಷ್ಟ್ರದ ವಿರುದ್ಧ ಅಲ್ಲ. ಬದಲಿಗೆ ಅದು ದೇಶದ ಎಲ್ಲಾ ರಾಷ್ಟ್ರೀಯ ಗುಂಪುಗಳು ಆರ್ಥಿಕ ಅವಲಂಬನೆ ಮತ್ತು ಹಿಂದುಳಿಕೆಯನ್ನು ಸಮಾಪ್ತಿಗೊಳಿಸಲು ನಡೆಸುತ್ತಿರುವ ಸರ್ವಸಾಮಾನ್ಯ ಹೋರಾಟದ ಒಂದು ಭಾಗವಾಗಿದೆ. ಭಾರತದ ಐಕ್ಯತೆಯನ್ನು ಕಾಪಾಡುವುದು ಈ ಸರ್ವಸಾಮಾನ್ಯ ಹೋರಾಟಕ್ಕೆ ಸಹಾಯಕಾರಿಯಾಗುತ್ತದೆ. ಅತ್ತ ವಿಚ್ಛಿದ್ರಕಾರೀ ಶಕ್ತಿಗಳ ಬೆಳವಣಿಗೆ ಹೋರಾಟನಿರತ ಜನತೆಯ ಸಂಘಟನೆಯನ್ನು ಮುರಿಯುವಲ್ಲಿ, ಅಸ್ತವ್ಯಸ್ತಗೊಳಿಸುವಲ್ಲಿ ಆಳುವ ವರ್ಗಗಳಿಗೆ ನೆರವಾಗುತ್ತದೆ.

"ರಾಷ್ಟ್ರೀಯ ಗುಂಪುಗಳ ಪ್ರಶ್ನೆ ಅಥವಾ ಪ್ರಚಲಿತ ಶಬ್ದಗಳಲ್ಲಿ ಹೇಳುವುದಾದರೆ, ಭಾಷಾವಾರು ರಾಜ್ಯಗಳ ಮತ್ತು ತಥಾಕಥಿತ ಕೇಂದ್ರ-ರಾಜ್ಯ ಸಂಬಂಧಗಳ ಸಮಸ್ಯೆ ಬೇರೆಯೇ ತೆರನದ್ದು. ಇಲ್ಲಿರುವ ನೀತಿಬದ್ಧ ಪ್ರಶ್ನೆಯೆಂದರೆ ಒಂದು ದಮನಕಾರೀ ರಾಷ್ಟ್ರ ಇತರ ಒಂದು ಅಥವಾ ಹಲವು ದಮನಕ್ಕೊಳಗಾದ ರಾಷ್ಟ್ರಗಳ ಮೇಲೆ ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಪ್ರಾಬಲ್ಯ ಮೆರೆಸುತ್ತಿದೆ ಎಂದು ಅಲ್ಲ. ಬದಲಿಗೆ, ಭಾರತ ಸಂಘದ ವಿವಿಧ ಸಣ್ಣ-ದೊಡ್ಡ ರಾಷ್ಟ್ರೀಯ ಗುಂಪುಗಳ ಹಿರಿ ಬೂರ್ಜ್ವಾ-ಭೂಮಾಲಕ ವರ್ಗಗಳು ರಾಜಕೀಯ ಅಧಿಕಾರ ಹಿಡಿದುಕೊಂಡು ವಿದೇಶೀ ಹಣಕಾಸು ಬಂಡವಾಳ ಸಹಯೋಗದೊಂದಿಗೆ ಬಂಡವಾಳಶಾಹೀ ಅಭಿವೃದ್ಧಿ ಮಾರ್ಗವನ್ನು ಅನುಸರಿಸಿರುವ ಪ್ರಶ್ನೆ ಇಲ್ಲಿಯದ್ದು. ಇಂತಹ ಒಂದು ವರ್ಗ-ಆಡಳಿತ ಮತ್ತು ಇಂತಹದೊಂದು ಅಭಿವೃದ್ಧಿ ಮಾರ್ಗದಿಂದ ಆರ್ಥಿಕ ಪರಾವಲಂಬನೆಯನ್ನು ಸಮಾಪ್ತಿಗೊಳಿಸುವುದಾಗಲೀ, ಬೂರ್ಜ್ವಾ-ಪ್ರಜಾಪ್ರಭುತ್ವ ಕ್ರಾಂತಿ ಘಟ್ಟದಲ್ಲಿ ಇನ್ನೂ ಸಾಧಿಸಬೇಕಾಗಿರುವ ಗುರಿಗಳನ್ನು ಪೂರ್ಣಗೊಳಿಸುವುದಾಗಲೀ ಸಾಧ್ಯವಾಗದು. ನಾವೀಗ ಕಾಣುತ್ತಿರುವುದು ಹಿರಿಬೂರ್ಜ್ವಾಗಳು, ಭೂಮಾಲಕರು ಮತ್ತು ವಿದೇಶೀ ಗುತ್ತೇದಾರಗಳ ವರ್ಗ ಶೋಷಣೆ ಮತ್ತು ದಮನದ ಸ್ವರೂಪವೇ ಹೊರತು ವಿದೇಶೀ ಸಾಮ್ರಾಜ್ಯಶಾಹಿಗಳಿಂದ ಭಾರತೀಯ ಜನತೆಯ ರಾಜಕೀಯ ದಮನವಾಗಲೀ ಅಥವಾ ಭಾರತದ ಯಾವುದೋ ಒಂದು ದಮನಕಾರೀ ರಾಷ್ಟ್ರದಿಂದ ಇತರ ಭಾರತೀಯ ರಾಷ್ಟ್ರೀಯ ಗುಂಪುಗಳ ದಮನವಾಗಲೀ ಅಲ್ಲ......ಹಲವು ಬೂರ್ಜ್ವಾ ಮತ್ತು ಕಿರಿ-ಬೂರ್ಜ್ವಾ ಪಕ್ಷಗಳು ಎತ್ತಿರುವ ಮತ್ತು ವ್ಯಕ್ತಪಡಿಸಿರುವ ಬೇಡಿಕೆಗಳು ರಾಷ್ಟ್ರೀಯ ವೇಷ ಧರಿಸಿದ್ದರೂ ಕೂಡಾ, ಅವನ್ನು ಸ್ಪಷ್ಟವಾಗಿ ಮತ್ತು ಜಾಗರೂಕತೆಯಿಂದ ಅಧ್ಯಯನ ಮಾಡಿದರೆ ಅವು ವಾಸ್ತವವಾಗಿ ವರ್ಗ ಬೇಡಿಕೆಗಳು ಎಂಬುದನ್ನು ಕಾಣಬಹುದು. ಅವು ಬೂರ್ಜ್ವಾ-ಭೂಮಾಲಕ ಆಡಳಿತ ಮತ್ತು ಅದು ಅನುಸರಿಸಿರುವ ಬಂಡವಾಳಶಾಹೀ ಅಭಿವೃದ್ಧಿಯ ದಿವಾಳಿಕೋರ ಮಾರ್ಗದಿಂದಾಗಿ ನಡೆದಿರುವ ಶೋಷಣೆಯ ಫಲವಾಗಿ ಹುಟ್ಟಿಕೊಂಡ ವರ್ಗ ಬೇಡಿಕೆಗಳು."

ಸಮಸ್ಯೆಯ ಮೂರು ಆಯಾಮಗಳು

ಭಾರತದಲ್ಲಿ ರಾಷ್ಟ್ರೀಯತಾ ಸಮಸ್ಯೆಯ ಸ್ವರೂಪವನ್ನು ರಶ್ಯಾದಲ್ಲಿ ಸ್ವಯಂ-ನಿರ್ಧಾರದ ಪ್ರಮುಖ ಘೋಷಣೆಯಾಗಿ ಹೊಂದಿದ್ದ ರಾಷ್ಟ್ರೀಯತಾ ಸಮಸ್ಯೆಯಿಂದ ಭಿನ್ನಗೊಳಿಸುವ ಅಂಶ ಇದು. ಭಾರತೀಯ ಸನ್ನಿವೇಶದಲ್ಲಿ ಸ್ವಯಂ-ನಿರ್ಧಾರವನ್ನು ಪ್ರತಿಪಾದಿಸಿದರೆ ಅದು ಜನತೆಯ ಶತ್ರುಗಳ, ಸಾಮ್ರಾಜ್ಯಶಾಹಿಗಳ ಬಲೆಗೆ ಬಿದ್ದಂತಾಗುತ್ತದೆ; ರಾಷ್ಟ್ರೀಯತಾ ಸಮಸ್ಯೆ ಇಲ್ಲಿ ಪಡೆದಿರುವ ವಿಶಿಷ್ಟ ಸ್ವರೂಪವನ್ನು, ಹಲವು ವರ್ಷಗಳಲ್ಲಿ ಅದರಲ್ಲಿ ಕಂಡು ಬಂದಿರುವ ಬೆಳವಣಿಗೆಗಳನ್ನು ನಿರ್ಲಕ್ಷಿಸಿದಂತಾಗುತ್ತದೆ.

ಭಾರತದಲ್ಲಿ ರಾಷ್ಟ್ರೀಯ ಗುಂಪುಗಳ ಸಮಸ್ಯೆಗೆ ಮೂರು ಆಯಾಮಗಳಿವೆ— (1) ಸಂವಿಧಾನದಲ್ಲಿ ಎಲ್ಲಾ ಭಾಷೆಗಳಿಗೆ ಸಮಾನತೆಯ ಭರವಸೆ (2) ಕೇಂದ್ರದೊಂದಿಗೆ ರಾಜ್ಯಗಳ ಸಮಾನ ಪಾಲುದಾರಿಕೆ ಮತ್ತು (3) ಅಸಮಾನ ಆರ್ಥಿಕ ಬೆಳವಣಿಗೆ.

ಬ್ರಿಟಿಶ್ ಆಳ್ವಿಕೆಯಲ್ಲಿ ಕೈಗಾರಿಕಾ ಪ್ರಗತಿ ಕೆಲವು ಬಂದರುಗಳಲ್ಲಿ ಮತ್ತು ಒಂದೆರಡು ಪ್ರಾಂತ್ಯಗಳ ಕೆಲವು ನಗರಗಳಲ್ಲಿಯೇ ಕೇಂದ್ರೀಕೃತವಾಗಿದ್ದು ಪ್ರಾಂತ್ಯಗಳಲ್ಲಿ ಅಸಮಾನ ಆರ್ಥಿಕ ಬೆಳವಣಿಗೆಯಿತ್ತು. ರಾಷ್ಟ್ರೀಯ ಗುಂಪುಗಳ ನಡುವೆ ಅಸಮಾನತೆಯ ಭಾವ ಸೃಷ್ಟಿಸಲು ಕಾರಣವಾದ ಒಂದು ಅಂಶ ಇದು. ಸ್ವಾತಂತ್ರ್ಯಾನಂತರದ ಅವಧಿಯಲ್ಲಿ ಬಂಡವಾಳಶಾಹೀ ಮಾರ್ಗದಲ್ಲಿ ಈ ಅಸಮಾನತೆಯ ಪರಂಪರೆ ಮುಂದುವರಿದು ಈ ಭಾವನೆ ಮತ್ತಷ್ಟು ಬಲಗೊಂಡಿತು. ಬಂಡವಾಳಶಾಹೀ ಪಥದ ಈ ಪರಿಣಾಮ ಸಂಕುಚಿತ ಪ್ರಾದೇಶಿಕತಾವಾದಿಗಳು ಮತ್ತು ಪ್ರತಿಕ್ರಿಯಾವಾದಿಗಳಿಗೆ ಸುಲಭವಾದ ಒಂದು ಆಯುಧವಾಗಿ ದೊರೆಯಿತು. ಅವರು ಇದನ್ನು ಒಂದು ರಾಷ್ಟ್ರೀಯ ಗುಂಪಿನ ದಾವೆಗಳನ್ನು ಮುಂದಿಟ್ಟು ಇನ್ನೊಂದರ ವಿರುದ್ಧ ಎತ್ತಿಕಟ್ಟಲು, ತನ್ಮೂಲಕ ಸಮಾನತೆಗಾಗಿ ನಡೆಯುವ ಸರ್ವಸಾಮಾನ್ಯ ಹೋರಾಟವನ್ನು ಅಸ್ತವ್ಯಸ್ತಗೊಳಿಸಲು ಬಳಸಿಕೊಂಡರು.

ಭಾಷಾ ಅಸಮಾನತೆ

ರಾಷ್ಟ್ರೀಯತಾ ಸಮಸ್ಯೆ ಉಲ್ಬಣಗೊಳ್ಳಲು ಒಂದು ಕಾರಣ ಎಲ್ಲಾ ಭಾಷೆಗಳಿಗೆ ಸಮಾನತೆಯ ಭರವಸೆ ನೀಡುವಲ್ಲಿ ಸಂವಿಧಾನದ ವಿಫಲತೆ ಮತ್ತು ತತ್ಪರಿಣಾಮವಾಗಿ ಕಂಡು ಬಂದಿರುವ ನಿರ್ಲಕ್ಷ್ಯ. ಒಂದಾದ ಮೇಲೊಂದರಂತೆ ಬಂದ ಸರಕಾರಗಳು ಹಿಂದಿಯನ್ನು ವಿಶಾಲ ಹಿಂದಿಯೇತರ ಜನಸ್ತೋಮದ ಮೇಲೆ ಹೇರಲು ಬಳಸಿದ ಮುಚ್ಚುಮರೆಯ ವಿಧಾನಗಳು ಈ ಪ್ರಕ್ರಿಯೆಯ ವೇಗವನ್ನು ಮತ್ತಷ್ಟು ಹೆಚ್ಚಿಸಿವೆ. ಸಂವಿಧಾನದ ಕರಡು ಸಿದ್ಧಗೊಳಿಸುವಾಗ ಹಿಂದಿಗೆ ಅಧಿಕೃತ ಭಾಷೆಯ ಸ್ಥಾನ ನೀಡಲು ಪ್ರಯತ್ನಿಸಲಾಯಿತು ಎಂಬುದು ಗೊತ್ತಿದೆ. ಅದು ಪೂರ್ಣವಾಗಿ ಯಶಸ್ವಿಯಾಗಲಿಲ್ಲ. ಆದರೂ ಭಾಷೆಗಳ ಸಮಾನತೆಯನ್ನು ಆಗಲೂ ಒಪ್ಪಿಕೊಳ್ಳಲಾಗಲಿಲ್ಲ. ಅದರ ಬದಲು ದಕ್ಷಿಣದ ಹಿಂದೀ ವಿರೋಧಿಗಳನ್ನು ಸಂತೃಪ್ತಗೊಳಿಸಲು ಹಿಂದಿಯೊಂದಿಗೆ ಇಂಗ್ಲೀಷಿಗೂ ಸಮಾನ ಸ್ಥಾನ ನೀಡಲಾಯಿತು. ಈ ರಾಜಿಯ ಏರ್ಪಾಡು ಸಮಯಸಾಧಕ ಸ್ವರೂಪ ಸ್ವಯಂವೇದ್ಯ.

ಅಲ್ಲದೆ ಒಂದು ಭಾಷೆಯ ಹೇರಿಕೆಯನ್ನು ವಿರೋಧಿಸುವವರಲ್ಲಿ ಕೂಡಾ ಎಲ್ಲರೂ ಸಮಾನತೆಯ ನೀತಿಯನ್ನು ಅರ್ಥೈಸಿ ತಮ್ಮ ವಿರೋಧ ವ್ಯಕ್ತಪಡಿಸುತ್ತಿಲ್ಲ ಎಂಬುವನ್ನೂ ಇದು ತೋರಿಸಿಕೊಡುತ್ತದೆ. ಅವರಲ್ಲಿ ಕೆಲವರು ಕೇವಲ ಹಿಂದೀ-ವಿರೋಧಿ ಸಂಕುಚಿತವಾದಿಗಳಷ್ಟೇ. ಅವರಿಗೆ ಭಾಷೆಗಳ ನಡುವಿನ ಸಮಾನತೆಗಿಂತ ಇಂಗ್ಲೀಷೇ ಸ್ವೀಕಾರಾರ್ಹ. ಹಿಂದೀ-ವಿರೋಧೀ ಸಂಕುಚಿತವಾದ ಸಮಾನತೆಯನ್ನು ನಿರಾಕರಿಸುವಷ್ಟೇ ಅಥವಾ ಜನತೆಯ ಮೇಲೆ ಒಂದು ಭಾಷೆಯನ್ನು ಹೇರಿಸುವಷ್ಟೇ ಪ್ರಜಾಪ್ರಭುತ್ವ—ವಿರೋಧಿಯಾದ ನಡವಳಿಕೆ. ಹಿಂದೀ ನಮ್ಮ

ವಿಲಿಯಗಟ್ಟಲೆ ಜನತೆಯ ಭಾಷೆ. ಅದರ ಬಗ್ಗೆ ತುಚ್ಛೀಕಾರದ ನಿಲುವು ತಳೆಯುವವರನ್ನು ಪ್ರಜಾ ಪ್ರಭುತ್ವವಾದಿ ಎಂದೆನ್ನಲು ಸಾಧ್ಯವಿಲ್ಲ. ಅಂತಹವರು ಪ್ರತ್ಯೇಕತೆ ಮತ್ತು ವಿಚ್ಛಿದ್ರಕಾರೀ ಹಿತಾಸಕ್ತಿಗಳಿಗೆ ನೆರವಾಗುತ್ತಾರಷ್ಟೆ.

ಬಹು-ಭಾಷಾ ಪ್ರಭುತ್ವವೊಂದರಲ್ಲಿ ಯಾವುದೇ ಒಂದು ಭಾಷೆಯ ವಿರುದ್ಧ ಭೇದ-ಭಾವ ತಕ್ಷಣವೇ ಅತೃಪ್ತಿ ಮತ್ತು ಪರಕೀಯ ಭಾವಕ್ಕೆ ಮೂಲವಾಗುತ್ತದೆ ಇದು ಸ್ವಾಭಾವಿಕವೇ. ಒಂದು ಸರ್ವ ಸಾಮಾನ್ಯ ಭಾಷೆಯ ಬಂಧನ ಮತ್ತು ಆ ಬಗ್ಗೆ ಹೆಗ್ಗಳಿಕೆ ಜನತೆಯ ಆಧುನಿಕ ಜಾಗೃತಿಯೊಂದಿಗೇ ಬೆಳೆದು ಬರುತ್ತದೆ. ಮತ್ತು ಒಂದು ರಾಷ್ಟ್ರೀಯ ಭಾವನೆಯಾಗಿ ಬೆಳೆಯುತ್ತದೆ.

ಸ್ವಾತಂತ್ರ್ಯ ಹೋರಾಟದ ದಿನಗಳಲ್ಲಿ

ಭಾರತದಲ್ಲಿ ಹಲವಾರು ಶತಮಾನಗಳಲ್ಲಿ ಮೊದಲ ಬಾರಿಗೆ ಸಾಮಾನ್ಯ ಜನತೆ — ಜಾತಿ ಪದ್ಧತಿಯಲ್ಲಿ ಅತ್ಯಂತ ದಲಿತರಾದವರು — ತಮ್ಮ ಭಾಷೆಯನ್ನು ಕಲಿಯುತ್ತಿರುವಾಗ ಅವರು ತಮ್ಮ ಭಾಷೆಯ ಬಗ್ಗೆ ಬಹಳ ಸೂಕ್ಷ್ಮ ಭಾವನೆ ಹೊಂದಿರುತ್ತಾರೆ. ವಾಸ್ತವ ಸ್ಥಿತಿಯೇನೆಂದರೆ, ಎಲ್ಲಾ ಭಾಷೆಗಳ ನಡುವೆ ಸಮಾನತೆ ಇಲ್ಲದಿರುವುದರಿಂದಾಗಿ ಕೆಲವು ರಾಜ್ಯಗಳಲ್ಲಿ ಭಾಷಾ ಸಂಕುಚಿತತೆ ಬೆಳೆಯುತ್ತಿದೆ. ಅಧಿಕೃತವಾಗಿ ನೇಮಕಗೊಂಡ ಸಮಿತಿಗಳು ಅಲ್ಪ ಸಂಖ್ಯಾತರು ಮತ್ತು ಇತರ ಭಾಷಾ ಗುಂಪುಗಳು ರಾಜ್ಯದ ಭಾಷೆಯನ್ನು ಅಧ್ಯಯನ ಮಾಡಲೇಬೇಕೆಂದು ಒತ್ತಾಯ ತರುವ, ಅವರಿಗೆ ತಮ್ಮ ಮಾತೃಭಾಷೆಯಲ್ಲಿ ಶಿಕ್ಷಣ ನಿರಾಕರಿಸುವ ಗಂಭೀರ ಶಿಫಾರಸುಗಳನ್ನು ಮಾಡುತ್ತಿವೆ. ಇವು ಸಾಮೂಹಿಕ ಭಾವಾವೇಶವನ್ನು ಹೊಡೆದೆಬ್ಬಿಸುವ ಸಾಮರ್ಥ್ಯ ಹೊಂದಿವೆ.

ಸ್ವಾತಂತ್ರ್ಯ ಹೋರಾಟದ ದಿನಗಳಲ್ಲಿ ರಾಷ್ಟ್ರೀಯ ಮುಖಂಡರು ವಿವಿಧ ಭಾಷೆಗಳ ಮಹತ್ತ್ವವನ್ನು ಮಾನ್ಯ ಮಾಡಲೇಬೇಕಾಗಿ ಬಂದಿತ್ತು.

ಭಾರತದ ಸಂವಿಧಾನದ ನೀತಿಗಳನ್ನು ನಿರ್ಧರಿಸಲು 1928 ರಲ್ಲಿ ಸರ್ವ ಪಕ್ಷಗಳ ಸಮ್ಮೇಳನ ನೇಮಿಸಿದ್ದ ಪಂಡಿತ ಮೋತೀಲಾಲ್ ನೆಹರೂ ಸಮಿತಿಯ ವರದಿ ಬಗ್ಗೆ ಹೇಳಿದ್ದ ಮಾತುಗಳಿವು— " ಶಿಕ್ಷಣದಲ್ಲಿ, ಹಾಗೇನೇ ಸಾರ್ವತ್ರಿಕ ಸಂಸ್ಕೃತಿಯಲ್ಲಿ ಮತ್ತು ಜೀವನದ ವಿವಿಧ ವಿಭಾಗಗಳಲ್ಲಿ ತೀವ್ರ ಪ್ರಗತಿ ಭಾಷೆಯನ್ನು ಅವಲಂಬಿಸಿದೆ. ಒಂದು ವಿದೇಶೀ ಭಾಷೆ ಶಿಕ್ಷಣ, ವ್ಯಾಪಾರದ ಮಾಧ್ಯಮವಾಗಿದ್ದರೆ.... ದೇಶದ ಜೀವನ ಅನಿವಾರ್ಯವಾಗಿಯೇ ಕುಂಠಿತಗೊಳ್ಳುತ್ತದೆ. ಒಂದು ಪ್ರಜಾಪ್ರಭುತ್ವಕ್ಕೆ ಸಂಗತಿಗಳ ಪೂರ್ಣ ಪರಿಚಯವಿರಬೇಕು, ಸಾರ್ವಜನಿಕ ವ್ಯವಹಾರಗಳನ್ನು ತಿಳಿದು, ಅರ್ಥ ಮಾಡಿಕೊಳ್ಳಲು ತನ್ಮೂಲಕ ಅವುಗಳಲ್ಲಿ ಪರಿಣಾಮಕಾರಿಯಾಗಿ ಭಾಗವಹಿಸಲು ಶಕ್ತವಾಗಿರಬೇಕು. ಅದ್ದರಿಂದ ದೇಶದ ವ್ಯವಹಾರ ಮತ್ತು ರಾಜಕೀಯವನ್ನು ಜನ ಸಮೂಹ ಅರ್ಥ ಮಾಡಿಕೊಳ್ಳಬಲ್ಲ ಒಂದು ಭಾಷೆಯಲ್ಲಿ ನಡೆಸುವುದು ಅನಿವಾರ್ಯವಾಗುತ್ತದೆ. ಇಂಥಹ ಭಾಷೆ, ಪ್ರಾಂತ್ಯಗಳಿಗೆ ಸಂಬಂಧಪಟ್ಟಂತೆ ಆಯಾ ಪ್ರಾಂತೀಯ ಭಾಷೆಯೇ ಆಗಿರಬೇಕು." (ಪುಟ 61-62)

ಭಾಷಾವಾರು ಆಧಾರಕ್ಕೆ ಮಾನ್ಯತೆ

ಇದನ್ನು ಒತ್ತಿ ಹೇಳಿರುವುದು ಇಂಗ್ಲೀಷಿನ ಪ್ರಾಬಲ್ಯದ ವಿರುದ್ಧ ಎನ್ನುವುದೇನೋ ನಿಜ. ಸಮಸ್ತ ಭಾರತಕ್ಕೆ ಹಿಂದೂಸ್ಥಾನಿ ಸರ್ವ ಸಾಮಾನ್ಯ ಭಾಷೆಯಾಗಬೇಕೆಂದು ಆ ವರದಿ ಶಿಫಾರಸು ಮಾಡಿತು. ಆದರೆ ಇಲ್ಲಿಯೂ ಇತರ ಭಾಷೆಗಳ ಮಹತ್ವವನ್ನು ಅವರು ಮಾನ್ಯ ಮಾಡಲೇಬೇಕಾಗಿ ಬಂದಿತ್ತು;

> ಬಹುಭಾಷಾ ಪ್ರಭುತ್ವವೊಂದರಲ್ಲಿ ಯಾವುದೇ ಒಂದು ಭಾಷೆಯ ವಿರುದ್ಧ ಭೇದ-ಭಾವ ತಕ್ಷಣವೇ ಅತೃಪ್ತಿ ಮತ್ತು ಪರಕೀಯ ಭಾವಕ್ಕೆ ಮೂಲವಾಗುತ್ತವೆ. ಇದು ಸ್ವಾಭಾವಿಕವೇ. ಒಂದು ಸರ್ವ ಸಾಮಾನ್ಯ ಭಾಷೆಯ ಬಂಧನ ಮತ್ತು ಆ ಬಗ್ಗೆ ಹೆಗ್ಗಳಿಕೆ ಜನತೆಯ ಆಧುನಿಕ ಜಾಗೃತಿಯೊಂದಿಗೇ ಬೆಳೆದು ಬರುತ್ತದೆ. ಮತ್ತು ಒಂದು ರಾಷ್ಟ್ರೀಯ ಭಾವನೆಯಾಗಿ ಬೆಳೆಯುತ್ತದ

'ಹಿಂದೂಸ್ಥಾನಿ ಈಗ ಅರ್ಧದಷ್ಟು ಭಾರತದ ಸಾರ್ವಸಾಮಾನ್ಯ ಭಾಷೆಯಾಗಿರುವುದರಿಂದ ಅದನ್ನು ಸಮಸ್ತ ಭಾರತದ ಸರ್ವಸಾಮಾನ್ಯ ಭಾಷೆಯಾಗಿ ಮಾಡಲು ಸರ್ವ ಪ್ರಯತ್ನ ನಡೆಸಬೇಕೆಂಬುದು ನಮ್ಮ ಬಲವಾದ ಅಭಿಪ್ರಾಯ. ಹೀಗಿದ್ದಾಗ್ಯೂ ಪ್ರಾಂತೀಯ ಭಾಷೆಗಳಿಗೆ ಪ್ರೋತ್ಸಾಹ ನೀಡಲೇಬೇಕಾಗಿದೆ. ಪ್ರಾಂತ ತ್ವರಿತ ಪ್ರಗತಿ ಸಾಧಿಸಬೇಕಾದರೆ ಅದು ತನ್ನ ಕೆಲಸವನ್ನು ತನ್ನ ಸ್ವಂತ ಭಾಷೆಯಲ್ಲೇ ನಡೆಸಲು ನಾವು ಅವಕಾಶ ಮಾಡಿಕೊಡಬೇಕಾಗಿದೆ.' (ಪುಟ 62)

ಅರ್ಧ ಶತಮಾನದ ಹಿಂದೆ ಸ್ವಾಧೀನತೆಗಾಗಿ ಭಾರತ ಹೋರಾಟ ನಡೆಸುತ್ತಿದ್ದಾಗ, ಬ್ರಿಟಿಶರ ವಿರುದ್ಧ ತನ್ನ ರಾಷ್ಟ್ರೀಯ ಸ್ಥಾನಮಾನವನ್ನು ಎತ್ತಿ ಸಾರುತ್ತಿದ್ದಾಗ ಭಾರತೀಯ ಮುಖಂಡರು ದೇಶದ ಪ್ರಾಂತ್ಯಗಳನ್ನು ಭಾಷಾವಾರು ಆಧಾರದ ಮೇಲೆ ಪುನರ್ವಿಂಗಡಿಸಬೇಕೆಂಬುದನ್ನು ಸ್ವೀಕರಿಸಬೇಕಾಗಿ ಬಂದಿತ್ತು ಎನ್ನುವುದು ಗಮನಾರ್ಹ. ಒಂದು ಪ್ರಾಂತ್ಯ ತನಗೆ ಶಿಕ್ಷಣ ನೀಡಿಕೊಳ್ಳಲು ಮತ್ತು ತನ್ನ ಸ್ವಂತ ಭಾಷೆಯ ಮಾಧ್ಯಮದ ಮೂಲಕ ತನ್ನ ದೈನಂದಿನ ಕೆಲಸ ನಡೆಸಲು ಸಾಧ್ಯವಾಗಬೇಕಾದರೆ ಅದು ಒಂದು ಭಾಷಾವಾರು ಪ್ರದೇಶವಾಗಿರಲೇ ಬೇಕು. ಅದೊಂದು ಬಹುಭಾಷಾ ಪ್ರದೇಶವಾಗಿ ಬಿಟ್ಟರೆ ಸತತವಾಗಿ ತೊಂದರೆಗಳು ಉದ್ಭವಿಸುತ್ತವೆ; ಎರಡು ಅಥವಾ ಹೆಚ್ಚು ಭಾಷೆಗಳು ಶಿಕ್ಷಣ ಮತ್ತು ಕೆಲಸದ ಮಾಧ್ಯಮಗಳಾಗಬೇಕಾಗುತ್ತದೆ. ಅದ್ದರಿಂದ ಪ್ರಾಂತ್ಯಗಳನ್ನು ಭಾಷಾವಾರು ಆಧಾರದ ಮೇಲೆ ಪುನರ್ವಿಂಗಡಿಸುವುದು ಅತ್ಯಂತ ಅಪೇಕ್ಷಣೀಯವಾಗುತ್ತದೆ."

ಹೀಗೆ ಹೇಳಿದ ನಂತರ ವರದಿಯಲ್ಲಿ ಒಂದು ಮಹತ್ವಪೂರ್ಣ ಶರಾ ಇದೆ— "ಭಾಷೆಗೆ ಅನುಗುಣವಾಗಿ, ಒಂದು ನಿಯಮವೋ ಎಂಬಂತೆ, ಸಂಸ್ಕೃತಿಯು, ಪರಂಪರೆಯು ಹಾಗೂ ಸಾಹಿತ್ಯದ ಒಂದು ವಿಶಿಷ್ಟ ಮಾದರಿಯಿರುತ್ತದೆ. ಒಂದು ಭಾಷಾವಾರು ಪ್ರದೇಶದಲ್ಲಿ ಈ ಎಲ್ಲಾ ಅಂಶಗಳು ಪ್ರಾಂತ್ಯದ ಸಾಮಾನ್ಯ ಪ್ರಗತಿಗೆ ನೆರವಾಗುತ್ತದೆ." ಭಾರತೀಯ ಐಕ್ಯತೆಯ ಪ್ರತಿಪಾದನೆಯ ನಡುವೆ ಭಾಷಾವಾರು ರಾಷ್ಟ್ರೀಯತೆಗಳನ್ನು ಮಾನ್ಯಮಾಡಿರುವುದನ್ನು ಇಲ್ಲಿ ಕಾಣಬಹುದಾಗಿದೆ.

ಅನಿವಾರ್ಯ ಒತ್ತಡ

ಮುಂದುವರಿದು ವರದಿ "ರಾಷ್ಟ್ರೀಯ ಕಾಂಗ್ರೆಸ್ ಈ ಭಾಷಾನೀತಿಯನ್ನು ಎಂಟು ವರ್ಷಗಳ ಹಿಂದೆ ಮಾನ್ಯ ಮಾಡಿತು. ಅಂದಿನಿಂದ ಕಾಂಗ್ರೆಸ್ ಕಾರ್ಯಯಂತ್ರಕ್ಕೆ ಸಂಬಂಧಪಟ್ಟಂತೆ ಭಾರತವನ್ನು ಭಾಷಾವಾರು ಪ್ರಾಂತ್ಯಗಳಾಗಿ ವಿಂಗಡಿಸಲಾಗಿದೆ." ಎಂಬ ಮಾತನ್ನೂ ಸೇರಿಸುತ್ತದೆ. ಕಾಂಗ್ರೆಸ್ ಅದೇಕೆ ಎಂಟು ವರ್ಷಗಳ ಹಿಂದೆ, ಅಂದರೆ 1920 ರಲ್ಲಿ, ತನ್ನ ರಾಜ್ಯಗಳನ್ನು ಭಾಷಾವಾರು ಆಧಾರದ ಮೇಲೆ ಸಂಘಟಿಸಿತು? ಯಾಕೆಂದರೆ ಆ ವೇಳೆಗಾಗಲೇ ಮೊದಲ ಅಸಹಕಾರ ಚಳುವಳಿ ಆರಂಭವಾಗಿತ್ತು. ರಾಷ್ಟ್ರೀಯ ಮುಖಂಡರು ರೈತಾಪಿ ಜನರನ್ನೂ ಸೇರಿದಂತೆ ಎಲ್ಲಾ ಜನ ಸಾಮಾನ್ಯರ ಬಳಿ ಸಾರಬೇಕಾಗಿತ್ತು. ವಿವಿಧ ರಾಜ್ಯಗಳ ವಿಶಾಲ ರೈತ ಜನಸಮೂಹಕ್ಕೆ ಇಂಗ್ಲೀಷೂ ತಿಳಿದಿರಲಿಲ್ಲ, ಹಿಂದೂಸ್ಥಾನಿಯೂ ತಿಳಿದಿರಲಿಲ್ಲ. ರೈತನ ಬಳಿಗೆ ಹೋಗಿ ಮಾತನಾಡ ಬೇಕಾದರೆ ಆತನ ಮಾತೃಭಾಷೆಯಲ್ಲಿಯೇ ಮಾತಾಡಬೇಕು. ಅದ್ದರಿಂದ ಭಾಷಾವಾರು ಆಧಾರದ ಮೇಲೆ ನಿಂತ ಒಂದು ಕಾಂಗ್ರೆಸ್ ಸಂಘಟನೆ ಅನಿವಾರ್ಯವಾಗಿತ್ತು. ಅಧಿಕೃತ ಪ್ರಾಂತ್ಯಗಳು ಹಲವು ಭಾಷೆಗಳನ್ನಾಡುವ ಜನರಿಂದ ಕೂಡಿದ ಬಹುಭಾಷಾ ಪ್ರದೇಶಗಳಾಗೇ ಮುಂದುವರಿದರೂ ಕೂಡಾ-(ಉದಾ: ಮದ್ರಾಸ್ ಪ್ರೆಸಿಡೆನ್ಸಿ, ಮುಂಬೈ ಪ್ರೆಸಿಡೆನ್ಸಿ ಇತ್ಯಾದಿ) ಕಾಂಗ್ರೆಸ್ ಪ್ರಾಂತ್ಯಗಳನ್ನೂ ಭಾಷಾವಾರು ಆಧಾರದ ಮೇಲೆ ಸಂಘಟಿಸಬೇಕಾಗಿತ್ತು. ರಾಜಕೀಯ ರಂಗದಲ್ಲಿ ಜನಸಾಮಾನ್ಯನ ವಿಶೇಷತಃ ರೈತನ ಆಗಮನ ಆತನ ಭಾಷೆಗೆ ಮಾನ್ಯತೆ ನೀಡುವಂತೆ ಮಾಡಿತ್ತು. ಮತ್ತು ಕಾಂಗ್ರೆಸ್ ಸಂಘಟನೆ ಭಾಷಾವಾರು ಪ್ರದೇಶಗಳನ್ನು ಆಧರಿಸಿರುವಂತೆ ಮಾಡಿತ್ತು. ಭಾಷೆಗೆ ಮಾನ್ಯತೆ ಮತ್ತು ಅದನ್ನಾಧರಿಸಿದ ಸಂಘಟನೆ ಉದ್ಭವಗೊಂಡಿದ್ದು ರಾಷ್ಟ್ರೀಯ ಹೋರಾಟದ ಅವಶ್ಯಕತೆಯಿಂದಾಗಿ, ರಾಷ್ಟ್ರೀಯ ಐಕ್ಯತಾ ಹೋರಾಟದ ಒಂದು ಭಾಗವಾಗಿ. ರಾಷ್ಟ್ರೀಯ ಪ್ರಜ್ಞೆ ಮತ್ತು ಭಾಷಾ ಜಾಗೃತಿ ಪರಸ್ಪರ ಅಕ್ಕ-ಪಕ್ಕದಲ್ಲಿ ಬೆಳೆದು ಬಂದು ಪರಸ್ಪರ ನೆರವಾದವು.

ಬಣ್ಣ ಬದಲು

ಆದರೆ ಇದ್ಯಾವುದೂ ಸ್ವಾಧೀನತೆಯ ನಂತರ ಭಾಷಾವಾರು ರಾಜ್ಯಗಳ ಸ್ಥಾಪನೆಗೆ ಕಾಂಗ್ರೆಸ್ ಆಳರಸರು ವಿರೋಧಿಸದಂತೆ ಈ ಬೇಡಿಕೆಯ ಚಳುವಳಿಯನ್ನು ಬಲಪ್ರಯೋಗದಿಂದ ದಮನಮಾಡದಂತೆ ತಡೆ ಹಿಡಿಯಲಿಲ್ಲ. ಆಂಧ್ರ, ಮಹಾರಾಷ್ಟ್ರ ಮುಂತಾದವುಗಳು ಒಂದು ಪ್ರತ್ಯೇಕ ರಾಜ್ಯದ ಒತ್ತಾಯ ಮುಂದಿಟ್ಟಾಗ ಕಾಂಗ್ರೆಸ್‌ನ ಅಮಾನುಷ ನಡವಳಿಕೆಯ ಅನುಭವ ಪಡೆದವು. ಮುಂಬೈಯಲ್ಲಿ ಕೇವಲ ಒಂದೇ ರಾತ್ರಿಯಲ್ಲಿ ಸಂಯುಕ್ತ ಮಹಾರಾಷ್ಟ್ರಕ್ಕಾಗಿ ಚಳವಳಿ ನಡೆಸಿದ ಅಪರಾಧಕ್ಕಾಗಿ ಒಂದು ನೂರು ಜನರನ್ನು ಗುಂಡಿಕ್ಕಿ ಕೊಲ್ಲಲಾಯಿತು. ಭಾಷಾ ಜಾಗೃತಿ ಮತ್ತು ಭಾಷಾವಾರು ರಾಜ್ಯಗಳ ಸ್ಥಾಪನೆಯು ಅಂದರೆ ಭಾಷಾವಾರು ರಾಷ್ಟ್ರೀಯತೆಗಳ ಮಾನ್ಯತೆಯ ಆರಂಭ ಹೀಗಿತ್ತು. ಈ ರೀತಿ ಎಲ್ಲಾ ಭಾಷೆಗಳ ನಡುವೆ ಸಮಾನತೆಯ ಅಭಾವ ಒಂದು ಸೂಕ್ಷ್ಮ ಸಮಸ್ಯೆಯಾಗಿ ಬಿಡುತ್ತದೆ. ಒಂದು ಏಕೈಕ ಭಾಷೆಯನ್ನು ಅಧಿಕೃತ ಭಾಷೆಯನ್ನಾಗಿ ಹೇರುವ ಪ್ರಯತ್ನಗಳು ಭಾರತದ ಐಕ್ಯತೆಗೆ ಬಹಳಷ್ಟು ತೊಂದರೆಯುಂಟುಮಾಡಿವೆ. ಹಿಂದಿಯೊಂದಿಗೆ ಇಂಗ್ಲೀಷಿಗೆ ಸಮಾನ ಸ್ಥಾನಮಾನ ನೀಡಿರುವುದು ಸಮಸ್ಯೆಯನ್ನು ಪರಿಹರಿಸುವುದಿಲ್ಲ; ಬದಲಿಗೆ, ಪರಿಸ್ಥಿತಿಯನ್ನು ಉಲ್ಬಣಗೊಳಿಸುತ್ತದೆ.

ಮೂರು ಅಂಶಗಳು

ಒಂದು ಬಹುರಾಷ್ಟ್ರೀಯ ಪ್ರಭುತ್ವದಲ್ಲಿ ಭಾಷೆಗಳಿಗೆ ಸಂಬಂಧಪಟ್ಟಂತೆ ಮಾರ್ಕ್ಸ್‌ವಾದೀ ನಿಲುವು ಬಹಳ ಸ್ಪಷ್ಟ- "ಕಾರ್ಮಿಕ ವರ್ಗದ ಪ್ರಜಾಪ್ರಭುತ್ವದ ರಾಷ್ಟ್ರೀಯ ಕಾರ್ಯಕ್ರಮವೇನೆಂದರೆ, ಯಾವುದೇ ಒಂದು ದೇಶಕ್ಕೆ ಅಥವಾ ಯಾವುದೇ ಒಂದು ಭಾಷೆಗೆ ಯಾವ ರೀತಿಯಲ್ಲೂ ಯಾವುದೇ ವಿಶೇಷಾಧಿಕಾರಗಳು ಇಲ್ಲ." "ಎಲ್ಲಾ ವಿಶೇಷಾಧಿಕಾರಗಳು ಮಾಯವಾದರೆ, ಯಾವುದೇ ಒಂದು ಭಾಷೆಯ ಹೇರಿಕೆ ನಿಂತರೆ, ಸ್ಲಾವ್ ಜನಾಂಗದ ಎಲ್ಲರೂ ಸುಲಭವಾಗಿ ಮತ್ತು ತ್ವರಿತ ಗತಿಯಿಂದ ಪರಸ್ಪರ ಅರಿತುಕೊಳ್ಳುತ್ತಾರೆ; ಮತ್ತು ಎಲ್ಲರಿಗೂ ಸೇರಿದ ಪಾರ್ಲಿಮೆಂಟಿನಲ್ಲಿ ವಿವಿಧ ಭಾಷೆಗಳ ಭಾಷಣ ಕೇಳಬೇಕಾಗಬಹುದು ಎಂಬ "ಭಯಾನಕ" ಯೋಚನೆಯಿಂದ ಅವರು ಭಯಭೀತರಾಗುವುದಿಲ್ಲ.

> ಯಾವುದೇ ಭಾಷೆಯನ್ನು ಬಲವಂತವಾಗಿ ಹೇರದಿರುವುದು, ಎಲ್ಲಾ ಭಾಷೆಗಳ ನಡುವೆ ಸಮಾನತೆ ಮತ್ತು ಪರಸ್ಪರ ಸಂಪರ್ಕಕ್ಕಾಗಿ ತಮ್ಮ ಆಯ್ಕೆಯ ಒಂದು ಭಾಷೆಯನ್ನು ಸರ್ವಸಾಮಾನ್ಯ ಭಾಷೆಯಾಗಿ ಸ್ವಯಮಿಚ್ಛೆಯಿಂದ ಅಂಗೀಕರಿಸುವುದನ್ನು ಜನತೆಗೇ ಬಿಟ್ಟು ಬಿಡುವುದು— ಹೀಗಿದೆ ಮಾರ್ಕ್ಸ್‌ವಾದೀ ನಿಲುವು.

ದೇಶದ ಯಾವ ಭಾಷೆಯನ್ನು ವಾಣಿಜ್ಯ ಸಂಬಂಧಗಳ ಹಿತಾಸಕ್ತಿಯಿಂದಾಗಿ ಬಹುಸಂಖ್ಯಾತರು ತಿಳಿದಿರುವುದು ಪ್ರಯೋಜನಕಾರಿಯಾಗಬಹುದೆಂದು ಆರ್ಥಿಕ ವಿನಿಮಯಗಳ ಅವಶ್ಯಕತೆಗಳೇ ನಿರ್ಧರಿಸುತ್ತವೆ. ಈ ನಿರ್ಣಯ ಇನ್ನಷ್ಟು ದೃಢವಾಗಿರುತ್ತದೆ. ಏಕೆಂದರೆ ವಿವಿಧ ರಾಷ್ಟ್ರೀಯತೆಗಳ ಒಂದು ಜನಸಮೂಹ ಸ್ವಯಮಿಚ್ಛೆಯಿಂದ ಇದನ್ನು ಅಂಗೀಕರಿಸುತ್ತಾರೆ. ಮತ್ತು ಪ್ರಜಾಪ್ರಭುತ್ವ ಹೆಚ್ಚು ಸ್ಥಿರವಾಗಿದ್ದಷ್ಟು ಅದರ ಅಂಗೀಕಾರ ಅಷ್ಟು ತ್ವರಿತ ಮತ್ತು ವ್ಯಾಪಕವಾಗುತ್ತದೆ, ಬಂಡವಾಳಶಾಹಿಯ ಬೆಳವಣಿಗೆಯೂ ಅಷ್ಟೇ ತ್ವರಿತಗತಿಯದಾಗುತ್ತದೆ." (ಲೆನಿನ್ Collected Works, ಸಂಪುಟ 19, ಪುಟ 354-355)

ಯಾವುದೇ ಭಾಷೆಯನ್ನು ಬಲವಂತವಾಗಿ ಹೇರದಿರುವುದು, ಎಲ್ಲಾ ಭಾಷೆಗಳ ನಡುವೆ ಸಮಾನತೆ ಮತ್ತು ಪರಸ್ಪರ ಸಂಪರ್ಕಕ್ಕಾಗಿ ತಮ್ಮ ಆಯ್ಕೆಯ ಒಂದು ಭಾಷೆಯನ್ನು ಸರ್ವ ಸಾಮಾನ್ಯ ಭಾಷೆಯಾಗಿ ಸ್ವಯಮಿಚ್ಛೆಯಿಂದ ಅಂಗೀಕರಿಸುವುದನ್ನು ಜನತೆಗೇ ಬಿಟ್ಟು ಬಿಡುವುದು—ಹೀಗಿದೆ ಮಾರ್ಕ್ಸ್‌ವಾದೀ ನಿಲುವು.

ಆದರೆ ಎಲ್ಲಾ ಸಮಸ್ಯೆಗಳ ಬಗ್ಗೆ ಒಂದು ಸ್ಥಿರವಾದ ಪ್ರಜಾಪ್ರಭುತ್ವವಾದೀ ನಿಲುವನ್ನು ತಳೆಯುವವರಿಗೇ ಮಾತ್ರ ಇದು ಸಾಧ್ಯ. ಭಾರತೀಯ ಸಂವಿಧಾನವನ್ನು ರೂಪಿಸಿದವರಿಗೆ ಇದು ಸಾಧ್ಯವಿರಲಿಲ್ಲ.

(ಮುಂದುವರಿಯುವುದು)

ಆಳಂದ ತಾಲೂಕು ರೈತರ ಜಾಥಾ

ಆಗಸ್ಟ್ 8 ರಂದು ಆಳಂದ ತಾಲೂಕು ರೈತರ ಜಾಥಾವನ್ನು ವಿ. ಕೆ. ಸಲಗಾರದಲ್ಲಿ ರೈತ ಮುಖಂಡ ಕಲ್ಲಪ್ಪ ಕಿರಣಗಿಯವರು ಉದ್ಘಾಟಿಸಿದರು. ಬಸವ್ವ ಮಠ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಸಭೆಯಲ್ಲಿ ಮೇಘರಾಜ, ಅರವಿಂದ ನಾಗೂರ ಮತ್ತು ಮಾನು ಭಾಷಣ ಮಾಡಿ ಜಾಥಾದ ಉದ್ದೇಶ ತಿಳಿಸಿ ಹೇಳಿದರು.

ರೈತ ಜಾಥಾ 21 ಗ್ರಾಮಗಳಿಗೆ ಭೇಟಿ ನೀಡಿ, ಕ್ರಾಂತಿ ಗೀತೆ ಹಾಡಿ, ಸಭೆ ನಡೆಸಿ, ರೈತರ ಸಮಸ್ಯೆಗಳನ್ನು ತಿಳಿದುಕೊಂಡು ಆಗಸ್ಟ್ 15 ರಂದು ಲಾಡ ಮುಗಳಿ ತಲುಪಿತು. ರೇವಪ್ಪ ಸೋರಡೆಯವರ ಮುಖಂಡತ್ವದಲ್ಲಿ ಜಾಥಕ್ಕೆ ಭವ್ಯ ಸ್ವಾಗತ ನೀಡಲಾಯಿತು. ತಾ|| 16 ರಂದು ಅಂಬಲಗಾದಲ್ಲಿ ಜಾಥಾದ ಮುಕ್ತಾಯ ಸಮಾರಂಭ ನಡೆಯಿತು. ಕಲ್ಲಪ್ಪ ವಗಾಚಿ ಅವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ನಡೆದು ಮುಖ್ಯ ಅತಿಥಿಗಳಾದ ಬಾಬು ಅವರು ಭಾಷಣ ಮಾಡಿದರು. "ಹಳ್ಳಿಯಿಂದ ಹಳ್ಳಿಗೆ ಜಾಥಾ" 21 ಹಳ್ಳಿಗಳನ್ನು ಸಂದರ್ಶಿಸಿ 22 ಸಭೆಗಳನ್ನು ನಡೆಸಿತು. ಈ ಸಭೆಗಳಲ್ಲಿ 1174 ರೈತರು-ಕೃಷಿ ಕಾರ್ಮಿಕರು ಭಾಗವಹಿಸಿದ್ದರು ಈ ಕಾರ್ಯಕ್ರಮದಿಂದ 63 ಕ್ರಿಯಾಶೀಲ ಕಾರ್ಯಕರ್ತರನ್ನು ಗುರುತಿಸಲು ಸಾಧ್ಯವಾಯಿತು. ಬಸವರಾಜ ಜವಳಿ, ಚಂದ್ರಕಾಂತ ಬಂಡಗಿ ಇವರ ಕ್ರಾಂತಿ ಗೀತೆಗಳು ಜನರನ್ನು ಆಕರ್ಷಿಸಿವೆ.

ಜಾಥಾದ ನೇತೃತ್ವವನ್ನು ಸಿದ್ರಾಮಪ್ಪ ಚಿ-ಚೋಳಿ, ಸಿದ್ರಾಮಪ್ಪಾ ಕೊಡಕೂರ, ಮೇಘರಾಜ ಕಠಾರ ಇವರು ವಹಿಸಿದ್ದರು. ಜಿಲ್ಲಾ ರೈತ ಸಂಘದ ಕಾರ್ಯದರ್ಶಿ ಕಲ್ಲಪ್ಪ ಕಿರಣಗಿ ಮತ್ತು ಮಾನು ಜಾಥಾದ ಉದ್ದಕ್ಕೂ ಇದ್ದು ಮಾರ್ಗದರ್ಶನ ನೀಡಿದರು.

ಸುಳ್ಯದಲ್ಲಿ ರೈತ ಸಂಘದ ಸಭೆ

2-9-1984 ನೇ ಆದಿತ್ಯವಾರದಂದು ಬೆಳಿಗ್ಗೆ 10 ಗಂಟೆಗೆ ಸುಳ್ಯ ತಾಲೂಕು ರೈತ ಸಂಘದ ಶಾಖೆಯಾದ ದೊಡ್ಡ ತೋಟವಲಯ ರೈತ ಸಂಘ ಸಮಿತಿಯ ವಿಸ್ತೃತ ಸಭೆ ಜರುಗಿತು. ಈ ಸಭೆಯಲ್ಲಿ ಸುಳ್ಯ ತಾಲೂಕು ರೈತ ಸಂಘದ ಪ್ರಧಾನ ಕಾರ್ಯದರ್ಶಿಯಾದ ಶ್ರೀ|| ಮೋನಪ್ಪಗೌಡ ಇವರು ಭಾಗವಹಿಸಿದ್ದರು ಮತ್ತು ರೈತರು ಕಾರ್ಮಿಕ ವರ್ಗದ ಸಖ್ಯತೆಯಲ್ಲಿ ನಡೆಯುವ ಹೋರಾಟದ ಬಗ್ಗೆ ಮತ್ತು ರೈತ ಕೂಲಿಗಾರರು ಐಕ್ಯತೆಯಾಗುವ ಅವಶ್ಯಕತೆ ಬಗ್ಗೆ ವಿವರಿಸಿದರು. ಶ್ರೀ| ಭಾಸ್ಕರರಾವ್ ಗತ ವರುಷದ ವರದಿಯನ್ನು ಓದಿದರು. ಸಭೆಯ ಅಧ್ಯಕ್ಷತೆಯನ್ನು ಶ್ರೀ| ಬಿ ಚನಿಯರವರು ವಹಿಸಿದ್ದರು. ಸರಕಾರಿ ಅಕ್ರಮ ಭೂಮಿಯಲ್ಲಿರುವವರಿಗೆ ಭೂಮಿ ಸಿಗಲು ರೈತ ಸಂಘ ನಡೆಸುವ ಹೋರಾಟವನ್ನು ಇನ್ನೂ ತೀವ್ರಗೊಳಿಸಬೇಕೆಂದೂ, ಊರಿನ ಸಹಕಾರಿ ಸಂಘಗಳಲ್ಲಿ ಆಗುತ್ತಿರುವ ದುರ್ವ್ಯವಹಾರದ ವಿರುದ್ಧ ಹೋರಾಡಬೇಕೆಂದೂ ನಿರ್ಧರಿಸಿತು.

ರೈತ ರಂಗ

ಭಾಸ್ಕರರಾವ್ ಅಧ್ಯಕ್ಷ, ಬಿ. ಚನಿಯ ಉಪಾಧ್ಯಕ್ಷ, ರಾಮಣ್ಣ ನಾಯಕ್ ಉಪಾಧ್ಯಕ್ಷ, ಬಿ. ಐತ ಪ್ರಧಾನ ಕಾರ್ಯದರ್ಶಿ, ಬಿ. ಸೀತಾರಾಂ ಕಾರ್ಯದರ್ಶಿ, ಯನ್. ಚಾಮಯ್ಯ ಗೌಡ-ಕಾರ್ಯದರ್ಶಿಯನ್ನಾಗಿ ಆರಿಸಲಾಯಿತು.

ರೈತರ ಸಭೆ

ತಾ| 27-8-84ರಂದು ಮುನ್ನೂರು ಗ್ರಾಮದ ರೈತರ ಸಭೆಯು ಶ್ರೀ ರಾಮನಾಯ್ಕರವರ ಅಧ್ಯಕ್ಷತೆಯಲ್ಲಿ ಜರಗಿತು. ಆರಂಭದಲ್ಲಿ ಶ್ರೀ ಆನಂದ ಬೆಳ್ಳಾಡರವರು ಸ್ವಾಗತಿಸಿದರು. ತಾಲೂಕು ರೈತ ಸಂಘದ ಕಾರ್ಯದರ್ಶಿ ರಾಮಚಂದ್ರ ಉಚ್ಚಿಲ್ ದ. ಕ. ಜಿಲ್ಲಾ ರೈತ ಸಂಘವು ರೈತರ ಸಮಸ್ಯೆಯ ಬಗ್ಗೆ ಕೈಗೊಂಡ ತೀರ್ಮಾನವನ್ನು ಸಭೆಗೆ ವಿವರಿಸಿದರು. ಗ್ರಾಮದ ತೋಡುಗಳಲ್ಲಿ ಹ್ಯೊಗೆ ತುಂಬಿ ಹಲವಾರು ರೈತರಿಗೆ ಕೃಷಿ ಮಾಡಲು ಸಾಧ್ಯವಿಲ್ಲದ ಪರಿಸ್ಥಿತಿಯಲ್ಲಿದ್ದಾರೆ. ಈ ತೋಡಿನ ಹ್ಯೊಗೆಯನ್ನು ತೆಗೆದು ರೈತರು ಕೃಷಿ ಮಾಡುವಂತೆ ಸರಕಾರ ಕ್ರಮ ಕೈಗೊಳ್ಳಬೇಕು. ರೈತರ ಸ್ವಾಧೀನವಿರುವ ಸರಕಾರಿ ಕುಮ್ಕಿ ಸ್ಥಳವನ್ನು ರೈತರಿಗೆ ಕಾಯಂಗೊಳಿಸಬೇಕು. ಗ್ರಾಮದಲ್ಲಿ ಸರಕಾರಿ ಸ್ಥಳವಲ್ಲಿ ಮನೆ ಕಟ್ಟಿ ವಾಸಿಸುತ್ತಿರುವವರಿಗೆ ಕೂಡಲೇ ಹಕ್ಕು ಪತ್ರ ಕೊಡಬೇಕೆಂದು ಸರಕಾರವನ್ನು ಒತ್ತಾಯಿಸಲು ತೀರ್ಮಾನ ಕೈಗೊಂಡಿತು. ಬಳಿಕ ಮುಂದಿನ ಚಟುವಟಿಕೆ ನಡೆಸಲು ಒಂದು ಹೊಸ ಕಮಿಟಿಯನ್ನು ರಚಿಸಲಾಯಿತು. ಅಧ್ಯಕ್ಷರಾಗಿ ಯು ಲಕ್ಷ್ಮಣ ನಾಯ್ಕ ಉಪಾಧ್ಯಕ್ಷರಾಗಿ ಶ್ರೀ ಮಹಾಬಲ ಶೆಟ್ಟಿ, ಕಾರ್ಯದರ್ಶಿಯಾಗಿ ಶ್ರೀ ಆನಂದಬೆಳ್ಳಾಡ ಹಾಗೂ ಜತೆ ಕಾರ್ಯದರ್ಶಿಯಾಗಿ ಶ್ರೀ ರಾಮನಾಯ್ಕರವರನ್ನು ಆಯ್ಕೆ ಮಾಡಲಾಯಿತು ಬಳಿಕ ರಾಮನಾಯ್ಕರವರು ಧನ್ಯವಾದಗಳನ್ನು ಅರ್ಪಿಸಿದರು

ಪ್ರಾಂತ ರೈತ ಸಂಘದ ಬಹಿರಂಗ ಸಭೆ

ದಿನಾಂಕ 28-8-84 ರಂದು ಪ್ರಾಂತ ರೈತ ಸಂಘದ ತಾಲೂಕ್ ಸಂಘಟನಾ ಸಮಿತಿಯು ಹರಪನಹಳ್ಳಿಯ ರಾಗೀಮಸಲ್‌ವಾಡ ಗ್ರಾಮದಲ್ಲಿ ಬೃಹತ್ ಬಹಿರಂಗ ಸಭೆ ನಡೆಸಿತು.

ಸಭೆಗೆ ಮುಂಚೆ ಗ್ರಾಮೀಣ ಕೈಗಾರಿಕೆಗಳ ವಿಚಾರ ಸಂಕಿರಣವನ್ನು ನಡೆಸಲಾಯಿತು. ಈ ಕಾರ್ಯಕ್ರಮದಲ್ಲಿ ವಿಸ್ತರಣಾಧಿಕಾರಿಗಳು ಸಾಲ ಸೌಲಭ್ಯಗಳ ಬಗ್ಗೆ ಸವಿಸ್ತಾರವಾಗಿ ಗ್ರಾಮದ ಜನರಿಗೆ ತಿಳಿಸಿದರು. ಪ್ರಾಂತ ರೈತಸಂಘದ ಅಧ್ಯಕ್ಷ ಕಾ. ಹಾಲತ್ತಿ ಹಾಲಪ್ಪನವರು ಸೌಲಭ್ಯಗಳನ್ನು ಸರಿಯಾಗಿ ಒದಗಿಸುವಂತೆ ಅಧಿಕಾರಿಗಳಿಗೆ ಒತ್ತಾಯಿಸಿದರು.

ದ. ಕ. ಜಿಲ್ಲಾ ಬೀಡಿ ಕಾರ್ಮಿಕರ ಸಮ್ಮೇಳನ

ಸೆಪ್ಟಂಬರ್ ತಾ|| 3 ರಂದು ಸೇರಿದ ದಕ್ಷಿಣ ಕನ್ನಡ ಜಿಲ್ಲಾ ಬೀಡಿ ಕಾರ್ಮಿಕರ ಫೆಡರೇಷನಿನ (ಸಿ.ಐ.ಟಿ.ಯು.) ಆಶ್ರಯದಲ್ಲಿ ಕಾ|| ಪಿ. ರಾಮಚಂದ್ರ ರಾವ್ ಎಂ. ಎಲ್. ಎ. ಇವರ ಅಧ್ಯಕ್ಷತೆಯಲ್ಲಿ ಬೀಡೀ ಕಾರ್ಮಿಕರ ಸಮಾವೇಶವು ಮಂಗಳೂರಿನ ಟೌನ್ ಹಾಲಿನಲ್ಲಿ ನಡೆಯಿತು.

ಸಮಾವೇಶದಲ್ಲಿ ಸುಮಾರು 600 ಪ್ರತಿನಿಧಿಗಳು ಭಾಗವಹಿಸಿದ್ದರು. ಇದರಲ್ಲಿ 300 ಸ್ತ್ರೀ ಮಜೂರರು. ಪ್ರಾರಂಭದಲ್ಲಿ ಕಾ|| ಸುಕುಮಾರರವರು ಸಮಾವೇಶಕ್ಕೆ ಬಂದ ಎಲ್ಲಾ ಪ್ರತಿನಿಧಿಗಳನ್ನು ಸ್ವಾಗತಿಸಿದ ನಂತರ ಕಾರ್ಮಿಕ ಮುಖಂಡರಾದ ಬಿ. ಮಾದವ ಯು ಬಿ ಲೋಕಯ್ಯ, ಜೆ. ಬಾಲಕೃಷ್ಣ ಶೆಟ್ಟಿ, ಕೆ. ಆರ್. ಶ್ರೀಯಾನ್ ಶಂಕರ್ ಮತ್ತು ಕೇರಳದ ಬೀಡಿ ಕಾರ್ಮಿಕರ ಮುಖಂಡರಾದ ಗೋಪಾಲನ್‌ರವರು ಮಾತಾಡಿದರು. ಹಲವಾರು ಧೀರ ಹೋರಾಟ ನಡೆಸಿ ಹಲವು ಸವಲತ್ತುಗಳನ್ನು ಪಡೆದ ಪರಂಪರೆ ಉಳ್ಳ ಜಿಲ್ಲೆಯ ಬೀಡೀ ಕಾರ್ಮಿಕರು ಇದೀಗ ಹೊಸ ಬೇಡಿಕೆಗಳ ಪ್ರಣಾಳಿಕೆಯನ್ನು ಸಭೆಯು ಅಂಗೀಕರಿಸಿ ಹಂತ ಹಂತವಾಗಿ ಹೋರಾಟದ ಕಾರ್ಯಕ್ರಮವನ್ನು ನಿರ್ಧರಿಸಿತು. ಅಲ್ಲದೆ 15 ಪ್ರಾದೇಶಿಕ ಬೀಡಿ ಯೂನಿಯನಿನ ಪ್ರತಿನಿಧಿಗಳು ಮಾತನಾಡಿ ಈ ಹೋರಾಟವನ್ನು ನಡೆಸುವಾಗಲೇ ದೇಶದಲ್ಲಿ ಇಂದು ಕೇಂದ್ರ ಸರಕಾರದ, ಕಾಂಗ್ರೆಸ್‌ನ ಸರ್ವಾಧಿಕಾರಿ ವರ್ತನೆಯನ್ನು ಖಂಡಿಸುವ ಮತ್ತು ಪ್ರಜಾಪ್ರಭುತ್ವದ ಕೊಲೆ ಮಾಡಿದ ನೀತಿಯ ವಿರುದ್ಧ ಎಲ್ಲಾ ಪ್ರಜಾ ಪ್ರಭುತ್ವ ಶಕ್ತಿಗಳ ಜತೆ ಸೇರಿ ಚಳುವಳಿಯನ್ನು ನಡೆಸುವ ತೀರ್ಮಾನವನ್ನು ಸಮಾವೇಶವು ಕೈಗೊಂಡಿತು.

ಬೇಡಿಕೆಗಳು;

ಬೀಡಿ ಕಾರ್ಮಿಕರಿಗೆ 20 ಶೇಕಡಾ ಬೋನಸ್ ಸಿಗಬೇಕು.

ದ. ಕ. ಜಿಲ್ಲಾ ಬೀಡಿ ಕಾರ್ಮಿಕರ ಫಡರೇಶನ್ ಜತೆ ಜಿಲ್ಲಾ ಕಲೆಕ್ಟರರ ಮತ್ತು ಜಿಲ್ಲಾ ಪೋಲೀಸ್ ಸೂಪರಿಂಟೆಂಡೆಂಟ್‌ರವರ ಸಮಕ್ಷಮದಲ್ಲಿ ರಾಜ್ಯದ ಪ್ರೊವಿಡೆಂಟ್ ಫಂಡ್ ಕಮೀಶನರರು ಸಹಿ ಹಾಕಿದ ಪ್ರೊವಿಡೆಂಟ್ ಫಂಡಿಗೆ ಸಂಬಂಧಿಸಿದ ಒಪ್ಪಂದದ ಶರ್ತಗಳನ್ನು ಕೂಡಲೇ ಜ್ಯಾರಿ ಮಾಡಬೇಕು.

ಜಿಲ್ಲೆಯ ಬೀಡಿ ಕಾರ್ಮಿಕರಿಗೆ ಮನೆಗಳನ್ನು ಕಟ್ಟಿಸಿ ಕೊಡುವ ಮತ್ತು ಮನೆಗಳನ್ನು ರಿಪೇರಿ ಮಾಡುವ ವ್ಯವಸ್ಥೆ ಕೂಡಲೇ ನಡೆಸಬೇಕು.

ಜಿಲ್ಲೆಯ ಬೀಡಿ ಕಾರ್ಮಿಕರ ಮಕ್ಕಳಿಗೆ ಶರ್ತರಹಿತ ವಿದ್ಯಾಭ್ಯಾಸ ಸ್ಕಾಲರ್‌ಶಿಪ್ ದೊರೆಯಬೇಕು.

ಜಿಲ್ಲೆಯ ಬೀಡಿ ಕಾರ್ಮಿಕರಿಗೆ ಕ್ಷಯರೋಗ ಚಿಕಿತ್ಸೆಗೋಸ್ಕರ ಮತ್ತು ಇತರರೋಗಗಳಿಗೆ ಔಷಧ ಕೊಡುವ ವ್ಯವಸ್ಥೆಯಾಗಬೇಕು.

ಒಂದು ತಿಂಗಳ ಪರ್ಯಂತ ಜಿಲ್ಲೆಯಾದ್ಯಂತ 3 ವರೆ ಲಕ್ಷ ಕಾರ್ಮಿಕರ ಮಧ್ಯ ಪ್ರಚಾರ, ಅಕ್ಟೋಬರ್ 1 ನೇ ವಾರದಲ್ಲಿ ಜಿಲ್ಲಾ ಡಿಪ್ಯೂಟಿ ಕಮೀಶನರ್ ಎದುರು ಮತಪ್ರದರ್ಶನ ಮತ್ತು ಗೆರಾವೊ.

ಸಮಾವೇಶದ ಅಧ್ಯಕ್ಷರಾದ ಕಾ| ಪಿ. ರಾಮಚಂದ್ರರಾಯರು ಮಾತಾಡುತ್ತಾ ಕೇಂದ್ರ ಸರಕಾರವು ಬೀಡಿ ಕೈಗಾರಿಕೆಯಿಂದ ವಸೂಲಿ ಮಾಡುತ್ತಿರುವ ಕೋಟಿಗಟ್ಟಲೆ ಟ್ಯಾಕ್ಸ್, ಲೆವಿ, ಮೊದಲಾದ ಹಣದಲ್ಲಿ ಬೀಡಿ ಕಾರ್ಮಿಕರಿಗೆ ವಸತಿ ಕಟ್ಟಿಸಿ ಕೊಡುವ ಔಷಧಿ ಕೊಡುವ ಮತ್ತು ಮಕ್ಕಳಿಗೆ ವಿದ್ಯಾಭ್ಯಾಸ ಕೊಡುವ ಕೆಲಸವನ್ನು ಮಾಡುವಂತೆ ಕ್ರಮವಹಿಸಲು ಶ್ರೀ ಜನಾರ್ಧನ ಪೂಜಾರಿಗಳು ಮುಂದೆ ಬರಲಿ, ಒಡವಂಗ ಸಾಲ ಕೊಟ್ಟು ಬಡವರನ್ನು ಉದ್ಧಾರ ಮಾಡುವ ನೀತಿಯನ್ನು ಕೈ ಬಿಡಲಿ ಎಂದರು.

ಪ್ರೊವಿಡೆಂಟ್ ಫಂಡ್ ಆಫೀಸನ್ನು ಕೇಂದ್ರ ಸರಕಾರವು ನಡೆಸುವುದಾದರೂ ಬಡ ಬೀಡಿ ಕಾರ್ಮಿಕರ ಕ್ಷೇಮನಿಧಿ ರಸೀದಿ ಲಕ್ಷ ಗಟ್ಟಲೆ ಬಾಕಿ ಇರುವುದು ಜನಾರ್ಧನ ಪೂಜಾರಿಗಳಿಗೆ ನಾಚಿಕೆ ಆಗಬೇಕು ಇದನ್ನು ಸರಿಪಡಿಸಲು ಅವರು ಯಾಕೆ ಮುಂದಾಗ ಬಾರದು ಎಂದರು.

ಬೀಡಿ ಕಾರ್ಮಿಕರು ಬೃಹತ್ ಪ್ರಮಾಣದಲ್ಲಿ ಹೋರಾಟ ನಡೆಸಿ ತಮ್ಮ ನ್ಯಾಯವಾದ ಬೇಡಿಕೆಗಳನ್ನು ಪಡೆಯಲು ಮುಂದಾಗಲಿ ಅವರ ಹೋರಾಟವು ಯಶಸ್ವಿಯಾಗಲೀ ಎಂದು ಹೇಳಿದರು.

ಕೋಟೆಕಾರ್ ಸರ್ಕಲ್ ಬೀಡಿ ಕಾರ್ಮಿಕ ಸಂಘದ 11 ನೇ ಮಹಾ ಸಭೆ

ಕೋಟೆಕಾರ್ ಸರ್ಕಲ್ ಬೀಡಿ ಲೇಬರ್ ಯೂನಿಯನಿನ 11ನೇ ವಾರ್ಷಿಕ ಮಹಾಸಭೆ ತಾ: 2-9-84 ರಂದು ಸೇರಿತು. ಜಿಲ್ಲಾ ಬೀಡಿ ಫೆಡರೇಶನ ಕಾರ್ಯದರ್ಶಿ ಕಾ. ಯು. ಬಿ. ಲೋಕಯ್ಯನವರು ಮಾತನಾಡುತ್ತಾ ಬೀಡಿ ಕಾರ್ಮಿಕ ಪ್ರಾವಿಡೆಂಟ್ ಫಂಡಿನ ರಶೀದಿ ಪಡೆಯಲು, ಶೇಕಡ 20 ಬೋನಸ್ಸು ಮತ್ತು ಬೀಡಿ ಕಾರ್ಮಿಕರ ಎಲ್ಲಾ ಮಕ್ಕಳಿಗೆ ವಿದ್ಯಾರ್ಥಿ ವೇತನ ಮತ್ತಿತರ ಪ್ರಮುಖ ಬೇಡಿಕೆಗಾಗಿ ಸೆಪ್ಟೆಂಬರ್ 10 ರಿಂದ ಪ್ರಾರಂಭಗೊಳ್ಳುವ ಹೋರಾಟದಲ್ಲಿಯೂ, ಅಕ್ಟೋಬರ್ ಮೊದಲ ವಾರದಲ್ಲಿ ಜಿಲ್ಲಾಧಿಕಾರಿ ಕಛೇರಿ ಎದುರು ನಡೆಯುವ ಸತ್ಯಾಗ್ರಹ ಚಳವಳಿಯಲ್ಲಿ ಸಾವಿರ ಸಾವಿರ ಸಂಖ್ಯೆಯಲ್ಲಿ ಬೀಡಿ ಕಾರ್ಮಿಕರನ್ನು ಸೇರಿಸುವಂತೆ ಕರೆ ನೀಡಿದರು. ರೈತ ಕಾರ್ಮಿಕರ ಮುಂದಾಳು ಶಾಸಕ ಕಾ. ಪಿ. ರಾಮಚಂದ್ರರಾಯರು ಮುಖ್ಯ ಅತಿಥಿಗಳಾಗಿ ಪ್ರಬಲ ಸಂಘಟನೆ ಮತ್ತು ತೀವ್ರವಾದ ಹೋರಾಟದಿಂದ ಮಾತ್ರ ಬೇಡಿಕೆ ಪಡೆಯಲು ಸಾಧ್ಯ ಎಂದು ಸಾರಿದರು. ಪ್ರಜಾಪ್ರಭುತ್ವದ ರಕ್ಷಣೆಗಾಗಿ ಬೀಡಿ ಕಾರ್ಮಿಕರೂ ಹೋರಾಟಕ್ಕಿಳಿಯ ಬೇಕು ಎಂದು ಕರೆ ನೀಡಿದರು. ಕಾ. ಕೆ. ನಾರಾಯಣ ಶೆಟ್ಟರು ಅಧ್ಯಕ್ಷತೆ ವಹಿಸಿದ್ದರು. ಕಾ. ಎಂ. ವೆಂಕಪ್ಪ ಶೆಟ್ಟಿಯವರು ಸ್ವಾಗತಿಸಿದರು. ಗತ ವರ್ಷದ ವರದಿಯನ್ನು ಕಾ. ಸುಕುಮಾರ ಮತ್ತು ಲೆಕ್ಕ ಪತ್ರವನ್ನು ಕಾ. ಉಮನಾಥ ರವರು ಸಭೆಯ ಮುಂದಿಟ್ಟರು. ಎಸ್. ಕೆ. ಪ್ರೆಸ್ ವರ್ಕರ್ಸ್ ಯೂನಿಯನಿನ ಕಾರ್ಯದರ್ಶಿ ಕಾ. ಬಿ. ಉಮನಾಥರವರು, ಅಳಪೆ ಪ್ರದೇಶ ಬೀಡಿ ಲೇಬರ್ ಯೂನಿಯನಿನ ಕಾರ್ಯದರ್ಶಿ ಕಾ. ಜೆ. ಬಾಲಕೃಷ್ಣ ಶೆಟ್ಟಿಯವರೂ, ಮಂಜೇಶ್ವರ ಏರಿಯಾ ಸಿ. ಐ. ಟಿ ಯು. ಕಾರ್ಯದರ್ಶಿ ಕಾ. ಗೋಪಾಲನ್ ಅವರೂ, ಡಿ. ವೈ. ಎಫ್. ಐ. ಮಂಗಳೂರು ತಾಲೂಕು ಸಮಿತಿ ಉಪಾಧ್ಯಕ್ಷರಾದ ಕೃಷ್ಣಪ್ಪ ಟೈಲರ್ ಅವರು ತಮ್ಮ ಸಂಘಟನೆಗಳ ಪರವಾಗಿ ಮಹಾಸಭೆಗೆ ಶುಭ ಕೋರಿ ಬೀಡಿ ಕಾರ್ಮಿಕರ ಮುಂದಿನ ಹೋರಾಟಗಳಿಗೆ ಸಂಪೂರ್ಣ ಬೆಂಬಲ ಸಾರಿದರು.

ಬಂಡವಾಳಶಾಹೀ ವ್ಯವಸ್ಥೆಯಲ್ಲಿ

ಥ್ಯಾಚರ್ ಆರ್ಥಿಕ ನೀತಿಗಳ ವಿರುದ್ಧ ಗಣಿ ಕಾರ್ಮಿಕರ ಹೋರಾಟ

(ಗಣಿ ಕಾರ್ಮಿಕರ ಮುಷ್ಕರ ಬ್ರಿಟಿಶ್ ಪ್ರಜಾ ಪ್ರಭುತ್ವದ ವರ್ಗ ಸ್ವಭಾವವನ್ನು ಪೂರ್ಣವಾಗಿ ಬಯಲಿಗೆಳೆದಿದೆ. ಗಣಿ ಕಾರ್ಮಿಕರಿಗೆ ಹಕ್ಕುಗಳಿಲ್ಲ, ದೈಹಿಕ ಹಿಂಸಾಚಾರದ ವಿರುದ್ಧ ಪೋಲೀಸರ ರಕ್ಷಣೆಯಿಲ್ಲ. ಕಾನೂನಿನ ನಿಯಮಗಳಂತೂ ಈ ತೀವ್ರ ವರ್ಗ ಹೋರಾಟದ ಪ್ರಥಮ ಬಲಿ. ಬ್ರಿಟಿಶ್ ಗಣಿ ಕಾರ್ಮಿಕರ ಈ ಚಾರಿತ್ರಿಕ ಹೋರಾಟದ ಒಂದು ಸಂಕ್ಷಿಪ್ತ ವರದಿ ಇಲ್ಲಿದೆ.)

ಪಶ್ಚಿಮ ಯುರೋಪಿನ ಬಂಡವಾಳಶಾಹೀ ದೇಶಗಳು ಬಂಡವಾಳಶಾಹೀ ಪದ್ಧತಿಯ ಅನಿವಾರ್ಯ ಬಿಕ್ಕಟ್ಟಿನಿಂದ ಬಲ್ಲಿ ಸಿಲುಕಿ ತತ್ತರಿಸುತ್ತಿವೆ. ಈಗ ಈ ದೇಶಗಳ ಸರಾಸರಿ ಹಣದುಬ್ಬರ 5.5 ಶೇಕಡಾ, ಆದರೆ ಫ್ರಾನ್ಸ್ ಮತ್ತು ಇಟಲಿಗಳಲ್ಲಿ 7 ಶೇಕಡಾ. ಮತ್ತು 10 ಶೇಕಡಾವೂ ಇದೆ. ಈ ಎಲ್ಲಾ ದೇಶಗಳಲ್ಲಿ ಇತ್ತೀಚಿನ ದಶಕಗಳಲ್ಲೇ ಕಾಣದಷ್ಟು — ಸರಾಸರಿ 10 ಶೇಕಡಾ - ನಿರುದ್ಯೋಗ ಇದೆ. ಇವುಗಳಲ್ಲಿ ಕೆಲವು ಪ್ರಮುಖ ದೇಶಗಳ ನಿರುದ್ಯೋಗ ಅಂಕಿ-ಸಂಖ್ಯೆ ಹೀಗಿದೆ-ಬ್ರಿಟನ್ (13 ಶೇಕಡಾ), ಪ. ಜರ್ಮನಿ (10 ಶೇಕಡಾ), ಫ್ರಾನ್ಸ್ (11 ಶೇಕಡಾ), ಇಟಲಿ (10 ಶೇಕಡಾ). ಎಂದಿನಂತೆ ಬಂಡವಾಳಶಾಹೀ ಬಿಕ್ಕಟ್ಟಿನ ದುಷ್ಪರಿಣಾಮಗಳ ಹೊರೆಯನ್ನು ಕಾರ್ಮಿಕ ವರ್ಗದ ಮೇಲೆ ಹೊರಿಸುವ ಪ್ರಯತ್ನಗಳು ಈ ಎಲ್ಲಾ ದೇಶಗಳಲ್ಲಿ ನಡೆಯುತ್ತಿವೆ. ಅದೇ ರೀತಿ ಇಂತಹ ಪ್ರಯತ್ನಗಳ ವಿರುದ್ಧ ಈ ಬಂಡವಾಳಶಾಹೀ ದೇಶಗಳ ಕಾರ್ಮಿಕ ವರ್ಗದ ಹೋರಾಟಗಳು ನಡೆಯಲಾರಂಭಿಸಿವೆ. ಈ ವರ್ಷ ಇದುವರೆಗೆ ನಡೆದಿರುವ ಹೋರಾಟಗಳಲ್ಲಿ ಬ್ರಿಟನ್ನಿನ ಗಣಿ ಕಾರ್ಮಿಕರ ಮುಷ್ಕರ ಪ್ರಮುಖವಾದುದು.

ಥ್ಯಾಚರ್ ನೀತಿಗೆ ವಿರೋಧ

ಬ್ರಿಟನ್ನಿನ ಕೈಗಾರಿಕೀಕರಣದಲ್ಲಿ ಕಲ್ಲಿದ್ದಲು ಗಣಿಗಳ ಸ್ಥಾನ ಬಹಳ ಮಹತ್ವದ್ದು. ಈಗಲೂ ಕೂಡಾ ವಿದ್ಯುತ್ ಉತ್ಪಾದನೆ ಮತ್ತು ಉಕ್ಕು ಕಾರ್ಖಾನೆಗಳು ಇದನ್ನೇ ಅವಲಂಬಿಸಿವೆ. ಈಗಾಗಲೇ ಸುಮಾರು 6 ತಿಂಗಳಿಂದ ನಡೆದು ಬರುತ್ತಿರುವ ಈ ಮುಷ್ಕರ ಇನ್ನೂ ಪರಿಹಾರ ಕಾಣುವ ಹಂತ ತಲುಪಿದಂತಿಲ್ಲ. ಇದು ಇತ್ತೀಚಿನ ದಶಕಗಳಲ್ಲಿ ಅತೀ ದೊಡ್ಡ ಪ್ರಮಾಣದ, ಮಹತ್ತರವಾದ ಮತ್ತು ರಾಜಕೀಯ ಮಹತ್ವ ಹೊಂದಿರುವ ಕಾರ್ಮಿಕ ವರ್ಗದ ಕಾರ್ಯಾಚರಣೆ ಎನ್ನಬಹುದು.

ಬ್ರಿಟನ್ನಿನಲ್ಲಿ ಕಲ್ಲಿದ್ದಲು ಗಣಿಗಳು ರಾಷ್ಟ್ರೀಕೃತ ಕೈಗಾರಿಕೆ. ಬ್ರಿಟಿಶ್ ಕಲ್ಲಿದ್ದಲು ಬೋರ್ಡಿನ ಪ್ರಕಾರ ಸುಮಾರು 20-70 ಗಣಿಗಳು "ಆರ್ಥಿಕವಾಗಿ ಅನಾರೋಗ್ಯಕರ" ಸ್ಥಿತಿಯಲ್ಲಿದ್ದಾವೆ. ರಾಷ್ಟ್ರೀಕೃತ ಕೈಗಾರಿಕೆಗಳಲ್ಲಿ ಬಂಡವಾಳ ಹೂಡಿ ಅಭಿವೃದ್ಧಿ ಪಡಿಸಬಾರದು, ಈ ಕೈಗಾರಿಕೆಗಳಲ್ಲಿ ಕಾರ್ಮಿಕರ ಸಂಖ್ಯೆಯನ್ನು ಕಡಿತಗೊಳಿಸಬೇಕು ಎಂಬ ಥ್ಯಾಚರ್ ನೀತಿಯ ನೇರ ಪರಿಣಾಮ ಈ ಕಲ್ಲಿದ್ದಲು ಕೈಗಾರಿಕೆಯಲ್ಲಿನ ಈ ಬಿಕ್ಕಟ್ಟು. ಗಣಿ ಕಾರ್ಮಿಕರು ಈ ನೀತಿಯ ವಿರುದ್ಧ ತಮ್ಮೆಲ್ಲಾ ಶಕ್ತಿ ಉಪಯೋಗಿಸಿ ಹೋರಾಡುತ್ತಿದ್ದಾರೆ.

ಬ್ರಿಟನ್ನಿನ ವಿವಿಧ ಭಾಗಗಳಲ್ಲಿ ಸುಮಾರು 2 ಲಕ್ಷ ಕಲ್ಲಿದ್ದಲು ಗಣಿ ಕಾರ್ಮಿಕರು ಕಲ್ಲಿದ್ದಲು ಉತ್ಪಾದನೆಯನ್ನು 40 ಲಕ್ಷ ಟನ್ನಿನಷ್ಟು ಕಡಿಮೆ ಮಾಡುವ, "ಆರ್ಥಿಕವಾಗಿ ಅನಾರೋಗ್ಯಕರ" ಸ್ಥಿತಿಯಲ್ಲಿರುವ ಗಣಿಗಳನ್ನು ಮುಚ್ಚಿ ತತ್ಪರಿಣಾಮವಾಗಿ ಸುಮಾರು 20 ಸಾವಿರ -70 ಸಾವಿರ ಕಾರ್ಮಿಕರನ್ನು ನೌಕರಿಯಿಂದ ತೆಗೆದು, ಭವಿಷ್ಯದ ಉದ್ಯೋಗ ನಿರ್ಮಾಣಕ್ಕೆ ಕೊಡಲಿಯೇಟು ಕೊಡುವ ಬ್ರಿಟಿಶ್ ಕಲ್ಲಿದ್ದಲು ಬೋರ್ಡಿನ ನಿರ್ಧಾರದ ವಿರುದ್ಧ ಮತ್ತು ಶೇ. 7 ಸಂಬಳ ಏರಿಕೆಗೆ ಒತ್ತಾಯಿಸಿ ಈ ಮುಷ್ಕರದಲ್ಲಿ ತೊಡಗಿದ್ದಾರೆ.

ದೇಶವ್ಯಾಪೀ ಹೋರಾಟ

ದೇಶಾದ್ಯಂತ ಗಣಿಗಳಲ್ಲಿ ಕೆಲಸ ಸ್ತಗಿತಗೊಂಡಿದೆ. "ಇನ್ನಷ್ಟು ಕಾರ್ಮಿಕರು ಕೆಲಸಕ್ಕೆ ಹಿಂದಿರುಗಿದ್ದಾರೆ" ಎಂದು ಪ್ರತಿದಿನ ಪತ್ರಿಕಾ ಹೇಳಿಕೆ ನೀಡುತ್ತಿರುವ ಬ್ರಿಟಿಶ್ ಕಲ್ಲಿದ್ದಲು ಬೋರ್ಡಿನ ಚೇರ್‌ಮನ್ ಪ್ರಕಾರವೇ 138 ಗಣಿಗಳಲ್ಲಿ 91 ರಲ್ಲಿ ಕೆಲಸ ಪೂರ್ತಿ ನಿಂತು ಹೋಗಿದೆ; 12 ಗಣಿಗಳಲ್ಲಿ ಹೆಚ್ಚು-ಕಡಿಮೆ ನಡೀತಾ ಇಲ್ಲ; 35 ಗಣಿಗಳಲ್ಲಿ "ಸಾಮಾನ್ಯ"ವಾಗಿದೆ. ವಾಸ್ತವವಾಗಿ, ನಾಟಿಂಗ್‌ಹ್ಯಾಮ್‌ಶಾಯರ್ ಮುಂತಾದ ಕೆಲವೆಡೆ "ಕರಿಗಾಲು"ಗಳ ಸಹಾಯದಿಂದ 'ಕೆಲಸ ನಡೀತಿದೆ" ಎಂಬ ನಾಟಕ ನಡೆಸಲು ಥ್ಯಾಚರ್ ಸರಕಾರಕ್ಕೆ ಮತ್ತು ಬೋರ್ಡಿಗೆ ಸಾಧ್ಯವಾಗಿದೆಯಷ್ಟೆ. ಕಲ್ಲಿದ್ದಲು ಉತ್ಪಾದನೆ 1983 ರ ಮೇ ತಿಂಗಳಲ್ಲಿ 98 ಲಕ್ಷ ಟನ್ ಇದ್ದುದು ಈ ವರ್ಷದ ಮೇ ತಿಂಗಳಲ್ಲಿ 28 ಲಕ್ಷ ಟನ್ನಿಗಿಳಿದಿದೆ.

ನ್ಯಾಶನಲ್ ಯೂನಿಯನ್ ಆಫ್ ಮೈನರ್ಸ್ (N. U. M.) ಈ ಚಾರಿತ್ರಿಕ ಮುಷ್ಕರದ ನೇತೃತ್ವ ವಹಿಸಿದೆ. ಬಂಡವಾಳ ಶಾಹೀ ದೇಶಗಳ ಕಾರ್ಮಿಕರಿಗೆ ಮಾದರಿಯಾಗುವ ರೀತಿಯಲ್ಲಿ N. U. M. ಈ ಮುಷ್ಕರ ನಡೆಸುತ್ತಿದೆ. ಪ್ರತಿವಾರ ಸುಮಾರು 1 ಲಕ್ಷ ಪೌಂಡ್ ಮುಷ್ಕರ ನಿಧಿ ಸಂಗ್ರಹಿಸಿ ಕಾರ್ಮಿಕರಿಗೆ ಸಾಧ್ಯವಾದಷ್ಟು ಪರಿಹಾರ ನೀಡಲು ಅದು ಯತ್ನಿಸುತ್ತಿದೆ. ಎಲ್ಲಾ ಗಣಿಗಳೆದುರು ಸರದಿ ಪ್ರಕಾರ ಪಿಕೆಟಿಂಗ್ ನಡೆಯುತ್ತಿದೆ. ಅರ್ಗ್‌ಂಬರ್ಗ ಕೆಲಸ ನಡೆಯುವಲ್ಲಿ ತೀವ್ರ ಪಿಕೆಟಿಂಗ್‌ನಿಂದಾಗಿ ಪೋಲೀಸ್‌ರೊಂದಿಗೆ, ಬೋರ್ಡ್ ಪ್ರತಿನಿಧಿಗಳೊಂದಿಗೆ ಮತ್ತು ಕರಿಗಾಲುಗಳೊಂದಿಗೆ ತಿಕ್ಕಾಟಗಳು ನಡೆದಿದೆ.

ಭಾರತದ ಜನತೆಯ ವಿರುದ್ಧ ಬ್ರಿಟಿಶ್ ಆಳರಸರು ಯಾವ ಭಯೋತ್ಪಾದಕ ತಂತ್ರಗಳನ್ನು ಬಳಸಿದರೋ ಅದನ್ನೇ ಈಗ ಬ್ರಿಟಿಶ್ ಗಣಿ ಕಾರ್ಮಿಕರ ವಿರುದ್ಧ ಬಳಸಲಾಗುತ್ತಿದೆ. ಒಬ್ಬ ಗಣಿ ಕಾರ್ಮಿಕ ಕಾಲಿನ್ ಡಿಕ್ಸನ್ ತನ್ನ ಬಂಧನದ ಬಗ್ಗೆ ಹೀಗೆ ಹೇಳಿದ್ದಾನೆ— "ನನ್ನನ್ನು ದಬ್ಬಿದರು, ಒದ್ದರು, ನೆಲಕ್ಕೆ ಕೆಡವಿದರು, ಎದೆಯ ಮೇಲೆ ಗುದ್ದಿದರು. ನನ್ನ ತಲೆಯ ಮೇಲಿಂದ ಕೈಯನ್ನು ಹಿಂದಕ್ಕೆಳೆದು ತಿರುಚಿ ಕಟ್ಟಿದರು—ಒಬ್ಬ ಪೋಲೀಸ್ ನನ್ನ ಗಂಟಲು ನಾಳ ಹಿಡಿದುಕೊಂಡು-ನೀನು ಬಂಧನವನ್ನು ವಿರೋಧಿಸುತ್ತಿದ್ದೀ, ಅಲ್ವಾ ?-ಅಂತ ಹೇಳುತ್ತಲೇ ಇದ್ದ. ಇಲ್ಲಾ ಎಂದು ಹೇಳಲು ನನಗೆ ಸಾಧ್ಯವಾಗಲಿಲ್ಲ. ಯಾಕೆಂದರೆ ನನಗೆ ಮಾತನಾಡಲು ಸಾಧ್ಯವಿರಲಿಲ್ಲ. ಕೈಗಳನ್ನು ಬೆನ್ನ ಹಿಂದೆ ಮೇಲಕ್ಕೆ ಕಟ್ಟಿ ನನಗೆ ಬೇಡಿ ತೊಡಿಸಿದರು." ("ನ್ಯೂ ಟೈಮ್ಸ್" ಪತ್ರಿಕೆಯಿಂದ)

"ಪಿಕೆಟಿಂಗ್ ಪ್ರಜಾಸತ್ತಾತ್ಮಕ ಕ್ರಮವಲ್ಲ" ಎಂಬ ಥ್ಯಾಚರ್ ಸರಕಾರ ಮತ್ತು ಬೋರ್ಡಿನ ಅಪಪ್ರಚಾರವನ್ನು ಬಂಡವಾಳಶಾಹೀ ಪತ್ರಿಕೆಗಳು, ರೇಡಿಯೋ, ಟಿವಿ. ಪ್ರತಿಧ್ವನಿಸುತ್ತಿವೆ.

"ಮುಕ್ತ ಪ್ರಜಾಪ್ರಭುತ್ವ"ದ ವೈಖರಿ

ಮುಷ್ಕರವನ್ನು ಮುರಿಯಲು ಸರಕಾರ ಮತ್ತು ಬೋರ್ಡ್ ಜಂಟಿಯಾಗಿ ಪ್ರಯತ್ನಿಸುತ್ತಿರುವುದನ್ನು ಎದುರಿಸಲು ಮುಷ್ಕರವನ್ನು ತೀವ್ರಗೊಳಿಸಲು N. U. M. ನಿರ್ಧರಿಸಿ ಪಿಕೆಟಿಂಗನ್ನು ಕಲ್ಲಿದ್ದಲು ಕೈಗಾರಿಕೆಗೆ ಸಂಬಂಧಿಸಿದ ಇತರ ಕೈಗಾರಿಕೆಗಳಿಗೂ ವಿಸ್ತರಿಸಿದೆ. ಕಲ್ಲಿದ್ದಲು ಸಾಗಿಸುವ ಬಂದರುಗಳಲ್ಲಿ, ರೈಲ್ವೇ ಯಾರ್ಡುಗಳಲ್ಲಿ ಮತ್ತು ಕಲ್ಲಿದ್ದಲು ಬಳಸುವ ಉಕ್ಕಿನ ಕಾರ್ಖಾನೆಗಳಲ್ಲಿ ಪಿಕೆಟಿಂಗ್ ಆರಂಭವಾಗಿದೆ.

ಸೌತ್‌ವೇಲ್ಸ್‌ನಲ್ಲಿರುವ ಟಾಲ್‌ಬೋತ್ ಮತ್ತು ಲಾಲ್‌ಹೆನ್ ಉಕ್ಕಿನ ಕಾರ್ಖಾನೆಗಳ ಎದುರು ಈ ರೀತಿ ಪಿಕೆಟಿಂಗ್ ನಡೆದಾಗ ಈ ಕಂಪನಿಗಳು N.U.M. ವಿರುದ್ಧ ಕೋರ್ಟಿಗೆ ಹೋಗಿವೆ. ಕೋರ್ಟು 1980 ಮತ್ತು 1982 Employment Act ಪ್ರಕಾರ N. U. M. ನ ಸೌತ್‌ವೇಲ್ಸ್ ಶಾಖೆಗೆ 25,000 ಪೌಂಡ್ ದಂಡ ವಿಧಿಸಿದೆ. ಈ ಕಾನೂನುಗಳ ಪ್ರಕಾರ ಮುಷ್ಕರ ನಿರತ ಕಾರ್ಮಿಕರು ಸಂಬಂಧಪಟ್ಟ ಇನ್ನೊಂದು ಕೈಗಾರಿಕ ಘಟಕಗಳೆದುರು ಪಿಕೆಟಿಂಗ್ ನಡೆಸುವುದು ಸಿವಿಲ್ ಅಪರಾಧ! ಇದು "ಮುಕ್ತ ಪ್ರಜಾಪ್ರಭುತ್ವಗಳು" ಎಂದು ಹೇಳಿಕೊಳ್ಳುವ ದೇಶಗಳಲ್ಲಿರುವ ವ್ಯಕ್ತಿ ಸ್ವಾತಂತ್ರ್ಯದ ಮಾದರಿ!

N. U. M. ಈ ಕ್ರಮವನ್ನು ಧೈರ್ಯದಿಂದ ಎದುರಿಸುತ್ತಿರುವುದು ಬಂಡವಾಳ ಶಾಹೀ "ಸ್ವಾತಂತ್ರ್ಯ" ಮತ್ತು "ಕಾನೂನು" ಪ್ರಿಯರಿಗೆ ಒಂದು ತಲೆನೋವಾಗಿದೆ. ಕೋರ್ಟ್ ತಾನು ವಿಧಿಸಿದ ದಂಡ ವಸೂಲಿಗೆ ಪ್ರತಿನಿಧಿಗಳನ್ನು N. U. M. ನ ಪ್ರಾದೇಶಿಕ ಕಚೇರಿಗೆ ಕಳಿಸಿದಾಗ 2000 ಕಾರ್ಮಿಕರು ಕಚೇರಿಯ ಸುತ್ತ ಪರಸ್ಪರ ಕೈ ಹೆಣೆದು ಮಾನವ ಬೇಲಿ ನಿರ್ಮಿಸಿ ಎದುರಿಸಿದರು. ಕೋರ್ಟು ತನ್ನ ಈ ಪ್ರಯತ್ನ ನಿಷ್ಫಲಿಸಿತು; ಆದರೆ ಕೋರ್ಟ್ ನಿಂದೆಯ ಅಪರಾಧ ಹೊರಿಸಿ ಈಗ N. U. M. ಮೇಲೆ ಇಮ್ಮಡಿ ದಂಡ ಹೊರಿಸಿ ಅದರ ಸೌತ್‌ವೇಲ್ಸ್ ಬ್ಯಾಂಕ್ ಖಾತೆಯ ಹಣವನ್ನು ಮುಟ್ಟುಗೋಲು ಹಾಕಿಸಿ ಆಜ್ಞೆ ಹೊರಡಿಸಿದೆ.

ಸಾರ್ವತ್ರಿಕ ಸ್ವರೂಪ

ಈ ರೀತಿ ವಿವಿಧ ರೀತಿಯ ಕಾನೂನುಗಳನ್ನು ಬಳಸಿ ಮುಷ್ಕರವನ್ನು ಮುರಿಯಲು ಥ್ಯಾಚರ್‌ರ ಜೋರಿ ಸರ್ಕಾರ ಪ್ರಯತ್ನಿಸುತ್ತಿರುವುದು ಈ ಮುಷ್ಕರದ ಒಂದು ವೈಶಿಷ್ಟ್ಯ ಎನ್ನಬಹುದು. ಇದನ್ನು ಬಗ್ಗು ಬಡಿದು ಕಾರ್ಮಿಕ ಸಂಘಗಳಿಗೆ 'ಪಾಠ' ಕಲಿಸಬೇಕೆಂದು ಸರಕಾರ ಪಣ ತೊಟ್ಟಂತಿದೆ. ಆದ್ದರಿಂದಲೇ ಒಂದು ಹಂತದಲ್ಲಿ ಇನ್ನೇನು ಇತ್ಯರ್ಥ ನಡೆಯಲಿದೆ ಎಂದಿದ್ದಾಗ ಬೋರ್ಡ್ ಚೇರ್‌ಮನ್ ಮೇಲೆ ಸರಕಾರ ಒತ್ತಡ ಹೇರಿತು. ಮೇಲೆ ಹೇಳಿದ ಪಿಕೆಟಿಂಗ್ ದಂಡ, ಯೂನಿಯನ್‌ಗಳ ಮತ್ತು ಮುಷ್ಕರ ನಿರತ ಕಾರ್ಮಿಕರ ವಿರುದ್ಧ ಕಂಗಾಲುಗಳ ಕೋರ್ಟ್ ದಾವೆಗಳು, ಖಾಸಗಿ ಕಂಪನಿಗಳ ದಾವೆಗಳು, ಟೋರಿಗಳ ಹತೋಟಿಯಲ್ಲಿರುವ ಮುನಿಸಿಪಾಲಿಟಿಗಳಲ್ಲಿ ಮುಷ್ಕರ ನಿಧಿಗೆ ಬೀದಿಗಳಲ್ಲಿ ಹಣ ಸಂಗ್ರಹಿಸಲು "ಲೈಸನ್ಸ್" ಇಲ್ಲ ಎಂಬ ನೆಪದ ಮೇಲೆ ಸಂಗ್ರಹಿಸಿದ ಹಣವನ್ನು ಪೋಲೀಸರು ದೋಚುವುದು, ಪ್ರಗತಿಪರ ವಿದ್ಯಾರ್ಥಿ ಸಂಘಟನೆಗಳು ಸಂಗ್ರಹಿಸಿದ ಹಣ ಮುಷ್ಕರ ನಿಧಿಗೆ ಸೇರದಂತೆ ಕ್ಷುಲ್ಲಕ ಕಾನೂನು ತಡೆ ಒಡ್ಡುವುದು, ಹೀಗೆ ಮುಷ್ಕರ ಮುರಿಯಲು ಸರಕಾರದ ಬಹು ಮುಖ ಪ್ರಯತ್ನ ನಡೆಯುತ್ತಲೇ ಇದೆ. "ಸರಕಾರ ಮುಷ್ಕರ ಎದುರಿಸಲು ಮಾಡುತ್ತಿರುವ ಖರ್ಚು ಮತ್ತು ಉತ್ಪಾದನಾ ನಷ್ಟ ಬ್ರಿಟನ್ನಿನ ರಾಜಕೀಯ ಭವಿಷ್ಯತ್ತಿಗೆ ಸಾರ್ಥಕ ಬಂಡವಾಳ" ಎಂದು ಬ್ರಿಟಿಶ್ ಹಣಕಾಸು ಮಂತ್ರಿ ಪಾರ್ಲಿಮೆಂಟಿನಲ್ಲಿ ಹೇಳಿರುವುದು ಸರಕಾರದ ಧೋರಣೆಗೆ ಹಿಡಿದ ಕೈಗನ್ನಡಿ.

ಆದರೆ ಇದರ ಪರಿಣಾಮವಾಗಿ ಗಣಿ ಕಾರ್ಮಿಕರ ಮುಷ್ಕರ ಈಗ ಸಾರ್ವತ್ರಿಕ ಸ್ವರೂಪ ಪಡೆಯುತ್ತಿದೆ. ಯಾವ ರಿಟ್ರೆಂಚ್‌ಮೆಂಟ್‌ಗಳ ವಿರುದ್ಧ, ಕಾರ್ಮಿಕ ಸಂಘಗಳ ಹಕ್ಕುಗಳನ್ನು ಬಗ್ಗುಬಡಿಯುವುದರ ವಿರುದ್ಧ, ಸದ್ಯದ ಮತ್ತು ಭವಿಷ್ಯದ ನಿರುದ್ಯೋಗವನ್ನು ಉಲ್ಬಣಗೊಳಿಸುವ ಆರ್ಥಿಕ ನೀತಿಗಳ ವಿರುದ್ಧ ಗಣಿಕಾರ್ಮಿಕರು ಹೋರಾಡುತ್ತಿದ್ದಾರೋ ಅವು ಇತರೆಲ್ಲಾ ಕಾರ್ಮಿಕರ ಸಮಸ್ಯೆಗಳು ಕೂಡಾ-ಮುಖ್ಯವಾಗಿ ಬ್ರಿಟಿಶ್ ರೈಲ್ವೇ ಮತ್ತು ಬಂದರು, ಮುಂತಾದ ರಾಷ್ಟ್ರೀಕೃತ ಕೈಗಾರಿಕೆಗಳ ಕಾರ್ಮಿಕರಿಗೆ. ರೈಲ್ವೇಯನ್ನು "ಆರ್ಥಿಕವಾಗಿ ಆರೋಗ್ಯಕರ" ಗೊಳಿಸಲು 40,000 ಕಾರ್ಮಿಕರನ್ನು ಸ್ವಾಭಾವಿಕ ನಿವೃತ್ತಿ ಮತ್ತು "ಸ್ವಯಂಪ್ರೇರಿತ ನಿವೃತ್ತಿ" ಗಳ ಮೂಲಕ ಕಡಿಮೆ

(8ನೇ ಪುಟ ನೋಡಿ)

ಪ್ರಜಾಪ್ರಭುತ್ವದ ರಕ್ಷಣೆಗಾಗಿ ಕಾಂಗ್ರೆಯನ್ನು ಸೋಲಿಸಿ

(1ನೇ ಪುಟದಿಂದ)

ನಡೆಸುವ ಅಧಿಕಾರ ಹೊಂದಿವೆ ಎಂದೂ ಅಂಥ ಸರಕಾರಗಳನ್ನು ರುಳಿಸುವ ಅಧಿಕಾರ ಮಾತ್ರ ಯಾವ ವ್ಯಕ್ತಿಗಾಗಲಿ ಸರಕಾರಕ್ಕಾಗಲೀ ಇಲ್ಲೆಂದೂ, ಹಾಗಾದಲ್ಲಿ ಅಂಥ ಕೃತ್ಯವನ್ನು ವಿರೋಧಿಸಲು ಎಲ್ಲರೂ ಒಂದಾಗ ಬೇಕೆಂದೂ ಕರೆ ಕೊಟ್ಟಿರುವುದನ್ನು ನೆನಪು ಮಾಡಿ ಕೊಟ್ಟರು.

ಆಹಾರ ಧಾನ್ಯದ ಉತ್ಪಾದನೆ ಹೆಚ್ಚಾಗುತ್ತಿದ್ದರು ಬೆಲೆ ಜಾಸ್ತಿಯಾಗುತ್ತಲೇ ಇದೆ. ದೇಶ ಹಾಗೂ ಜನತೆಯ ಮುಂದೆ ಇಂಥ ಹಲವಾರು ಸಮಸ್ಯೆಗಳಿವೆ, ಅವುಗಳ ವಿರುದ್ಧ ಹೋರಾಟ ಮಾಡುವ ಅಧಿಕಾರ ಜನರಿಗೆ ಬೇಕು 17 ವಿರೋಧ ಪಕ್ಷಗಳ ಕಲ್ಕತ್ತ ಸಮಾವೇಶದ ಕಾರ್ಯಕ್ರಮದ ಆಧಾರದಲ್ಲಿ ಕಾಂಗ್ರೆ ವಿರೋಧಿ ಸರಕಾರ ಅಧಿಕಾರಕ್ಕೆ ಬಂದಿದ್ದಾದರೆ, ನಮಗೆ ಪರಿಹಾರ ಸಿಗಬಹುದೆಂಬ ಅಪೇಕ್ಷೆ ಇದೆ. ಆದ್ದರಿಂದ ನಾವು ಒಗ್ಗಟ್ಟಾಗಿ ಕೆಲಸ ಮಾಡಿದರೆ ಕಾಂಗ್ರೆಸ್ಸನ್ನು ಸೋಲಿಸಿ, ಬದ್ಲಿ ಸರಕಾರ ರಚಿಸಬಹುದು. ನಮ್ಮ ಸಿದ್ಧಾಂತ ಬೇರೆಯಾಗಿರಬಹುದು. ಆದರೆ 1977 ರಂತೆ ಕಾಂಗ್ರೆಯನ್ನು ಸೋಲಿಸಲು ನಾವು ಐಕ್ಯ ಸಾಧಿಸಬಹುದು.

ಜನತಾ ಮತ್ತು ಇತರ ಕೆಲವು ವಿರೋಧ ಪಕ್ಷಗಳಿಗೂ ನಮಗೂ ಯುದ್ಧ ಹಾಗೂ ಶಾಂತಿಯ ಕುರಿತು ಭಿನ್ನಾಭಿಪ್ರಾಯಗಳಿವೆ. ಆದರೆ ನಾವು ಅಮೇರಿಕ ಮತ್ತು ಇತರ ಸಾಮ್ರಾಜ್ಯಶಾಹಿಗಳ ವಿರುದ್ಧ ಶಾಂತಿಗಾಗಿ ಹೋರಾಡುತ್ತೇವೆ. ನಮ್ಮ ನಿಲುವು ನಮಗೆ, ಅವರ ನಿಲುವು ಅವರಿಗೆ. ಆದರೆ ಇಂದಿರಾ ವಿರುದ್ಧ ಹೋರಾಟದಲ್ಲಿ ನಾವೆಲ್ಲ ಒಟ್ಟಿಗೆ. ನಮಗೆಲ್ಲರಿಗೂ ಬೇಡವಾದ ಶಕ್ತಿಯ ವಿರುದ್ಧ ಹೋರಾಡುವಾಗ ನಮ್ಮೊಳಗಿನ ಭಿನ್ನಾಭಿಪ್ರಾಯಗಳು ಅಡ್ಡ ಬರಬಾರದು, ಅವು ಅಡ್ಡ ಬರಲಾರವು.

ಪ್ರಜಾಪ್ರಭುತ್ವದ ರಕ್ಷಣೆಗಾಗಿ, ಸರ್ವಾಧಿಕಾರದ ವಿರುದ್ಧ, ಕಾಂಗ್ರೆಯೇತರ ಸರಕಾರಗಳನ್ನು ಉರುಳಿಸುವಿಕೆಯ ವಿರುದ್ಧ ಹೋರಾಟದಲ್ಲಿ ಎಲ್ಲ ಜನತೆ ಸೇರಿಕೊಂಡಿದೆ, ಲೋಕಸಭೆ ಚುನಾವಣೆಯಲ್ಲಿ ಇಂದಿರಾ ಕಾಂಗ್ರೆಸ್ಸನ್ನು ಸೋಲಿಸಲು ಈ ಶಕ್ತಿಯನ್ನು ಉಪಯೋಗಿಸೋಣ. ನಾವು ಒಂದಾದರೆ ಕಾಂಗ್ರೆಸ್ ಸೊನ್ನೆಯಾಗುತ್ತದೆ. ಎಂದು ಕಾ. ನಂಬೂದಿರಿಪಾಡ್ ಹೇಳಿದರು

ತಾ|| 20 - ಭಾರತ ಬಂದ್

ಆಂಧ್ರ ಜನತೆಗಾದ ಅನ್ಯಾಯವನ್ನು ಪ್ರತಿಭಟಿಸಲು ತಾ| 20 ರಂದು "ಭಾರತ ಬಂದ್", ತಾ 19 ರಂದು ತಾಲೂಕ್ ಜಿಲ್ಲಾ ಸ್ಥಳಗಳಲ್ಲಿ ಪ್ರತಿಭಟನೆ, ಧರಣಾ, ಮತ ಪ್ರದರ್ಶನಗಳನ್ನು ನಡೆಸಬೇಕೆಂದು, ತಾ 14 ರಂದು ದಿಲ್ಲಿಯಲ್ಲಿ ಸೇರಿದ ಎಲ್ಲ ವಿರೋಧ ಪಕ್ಷಗಳು ಕರೆ ಕೊಟ್ಟಿವೆ. ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಸಿ.ಪಿ.ಐ.(ಎಂ) ಈ ಮೂಲಕ ಕೇಳಿಕೊಳ್ಳುತ್ತದೆ.

ನಾಚಿಕೆಗೇಡು ಕೃತ್ಯ

ತನ್ನ ಬಹುಮತ ಪ್ರದರ್ಶಿಸಲು ಇದೇ ತಿಂಗಳು 11 ರಂದು ಆಂಧ್ರ ಶಾಸನಸಭೆ ಕರೆಯಲಾಗಿತ್ತು. ಮೂರು ದಿವಸ ಸಭೆ ಸೇರಿದರೂ ಕೂಡ ಭಾಸ್ಕರ ರಾವ್ ತನ್ನ ಬಹು ಮತ ಪ್ರದರ್ಶಿಸುವುದರಲ್ಲಿ ವಿಫಲಗೊಂಡಿದ್ದಾರೆ. ತಮಗೆ ಬಹು ಮತವಿಲ್ಲೆಂದು ತಿಳಿದೇ ತಮ್ಮ ಗುಂಪಿನ ಮತ್ತು ಮಜಲೀಸ್ ಪಕ್ಷದ ಶಾಸಕರಿಂದ ಉದ್ದೇಶ ಪೂರ್ವಕವಾಗಿ ಗಲಾಟೆ ಎಬ್ಬಿಸಿ ಗೊಂದಲವನ್ನುಂಟು ಮಾಡುತ್ತಲೇ ಬಂದರು. ಎನ್. ಟಿ. ಆರ್. ಸರಕಾರ ಉರುಳಿಸುವುದರಲ್ಲಿ ತಮ್ಮ ಕೈವಾಡವಿಲ್ಲೆಂದು ಜಗಜ್ಜಾಹೀರವಾಗಿ ಬೊಬ್ಬೆ ಹಾಕುತ್ತಿರುವ ಇಂದಿರಾ ಗಾಂಧಿ ಚೇಲಾಗಳು ಶಾಸನ ಸಭೆಯಲ್ಲಿ ನಡೆದಿರುವ ನಾಚಿಕೆಗೇಡಿ ಕೃತ್ಯಗಳನ್ನು ನೋಡುತ್ತ ಹಲ್ಲುಕಿಸಿಯುತ್ತಿದ್ದರು ಹಿರಿಯ ಕಾಂಗ್ರೆ ಶಾಸಕ ತಾತ್ಕಾಲಿಕ ವಿಧಾನ ಸಭಾಧ್ಯಕ್ಷ ಬಾಗಾರೆಡ್ಡಿಯವರು ಗೊಂದಲ ಉಂಟು ಮಾಡಿದವರ ವರ್ತನೆಯನ್ನು ಖಂಡಿಸಿ, ಶಾಂತಿ ಪಾಲನೆಯಲ್ಲಿ ತನ್ನ ಅಸಮರ್ಥತೆಯನ್ನು ಪ್ರದರ್ಶನ ಮಾಡಿ ರಾಜಿನಾಮೆ ಕೊಡಬೇಕಾಯಿತು. ಶಾಸನ ಸಭೆ ನಡೆಯುವಂತೆ ಕ್ರೂರ ಕೃತ್ಯದಲ್ಲಿ ತೊಡಗಿದ್ದ ಮಜಲಿಸ್ ಪಕ್ಷದ ಒಬ್ಬ ಶಾಸಕರನ್ನು ಅಧ್ಯಕ್ಷರನ್ನಾಗಿ ಮಾಡಿರುವುದನ್ನು ನೋಡುವಾಗ ಒಂದು ತಿಂಗಳೊಳಗಾಗಿ ತನ್ನ ಬಹು ಮತ ಪ್ರದರ್ಶಿಸುತ್ತೇನೆಂದು ಹೇಳಿದ್ದ ಭಾಸ್ಕರರಾವ್ ತನಗೆ ಬಹು ಮತವಿಲ್ಲೆಂದು ಖಾತ್ರಿಯಾಗಿರುವುದರಿಂದ ತಾನು ಆಳದಿದ್ದರೆ ರಾಷ್ಟ್ರಾಧ್ಯಕ್ಷರಾದರೂ ಆಳಲಿ ಎಂಬ ನಿರ್ಣಯಕ್ಕೆ ಬಂದಂತೆ ಕಂಡು ಬರುತ್ತದೆ. ಎನ್. ಟಿ ಆರ್ ಶಾಸಕರನ್ನು ಪಕ್ಷಾಂತರಗೊಳಿಸಲು ಮಾಡಿದ ಪ್ರಯತ್ನಗಳೆಲ್ಲಾ ವಿಫಲಗೊಂಡಾಗ ಈ ನಿರ್ಣಯಕ್ಕೆ ಬಂದಿರಬೇಕು. ಇಂಥ ಸಂಧಿಗ್ದ ಪರಿಸ್ಥಿತಿಯಲ್ಲಿ ಕಾಂಗ್ರೆ ಶಾಸಕರು ಭಾಸ್ಕರರಾವ್‌ಗೆ ನೀಡಿದ ಬೆಂಬಲವನ್ನು ಹಿಂದೆ ತೆಗೆದುಕೊಳ್ಳುತ್ತಾರೆಯೋ ಹೇಗೆಂಬುವನ್ನು ನೋಡಬೇಕಾಗಿದೆ. ಭಾಸ್ಕರರಾವ್, ಮಜಲಿಸ್ ಶಾಸಕರ ವರ್ತನೆ ಅತ್ಯಂತ ನಾಚಿಕೆ ಗೇಡಿತನ. ಅಂಥವರಿಗೆ ಬೆಂಬಲ ನೀಡುವ ಕಾಂಗ್ರೆ ಶಾಸಕರ ನೀತಿ ಅತ್ಯಂತ ಖಂಡನೀಯ.

ಥ್ಯಾಚರ್ ಆರ್ಥಿಕ ನೀತಿಗಳ ವಿರುದ್ಧ ಬ್ರಿಟಿಶ್ ಗಣಿ ಕಾರ್ಮಿಕರ ಹೋರಾಟ

(7ನೇ ಪುಟದಿಂದ)

ಮಾಡುವ ಯೋಜನೆ, ಹಿಂಬಾಗಿಲಿನಿಂದ ಖಾಸಗೀಕರಣಗೊಳಿಸುವ ಯೋಜನೆ ಈಗಾಗಲೇ ಆರಂಭವಾಗಿ 9000 ರೈಲ್ವೇ ಕಾರ್ಮಿಕರು, 800 ನೌಕಾಕಾರ್ಮಿಕರು, ಕೆಲಸ ಕಳಕೊಂಡಿದ್ದಾರೆ. ಇದರ ವಿರುದ್ಧ ಈಗಾಗಲೇ ಈ ಕೈಗಾರಿಕೆಗಳಲ್ಲಿ ಪ್ರತ್ಯೇಕವಾಗಿ ಮುಷ್ಕರಗಳೂ ನಡೆದಿವೆ.

ರಾಜಕೀಯ ಪರಿಣಾಮ

NUM ಅಧ್ಯಕ್ಷ ಸ್ಕ್ಯಾರ್‌ಗಿಲ್ ಈ ರೀತಿ ಸಮನಾಗಿ ಎಲ್ಲಾ ಬ್ರಿಟಿಶ್ ಕಾರ್ಮಿಕರನ್ನು ಬಾಧಿಸುತ್ತಿರುವ ಈ ಪ್ರಮುಖ ಪ್ರಶ್ನೆಗಳನ್ನೆತ್ತಿಕೊಂಡು ಸಾರ್ವತ್ರಿಕ ಮುಷ್ಕರ ನಡೆಸಲು ಇತರ ಯೂನಿಯನ್ ಗಳೊಂದಿಗೆ ಸಂಧಾನ ನಡೆಸುತ್ತಿದ್ದಾರೆ. ರೈಲ್ವೇ, ಬಂದರು, ಸಾಮಾನ್ಯ ಸಾಗಾಣಿಕೆ ಮುಂತಾದ ದೊಡ್ಡ ಯೂನಿಯನ್‌ಗಳಜತೆ ಆಗಲೇ ಒಪ್ಪಂದಕ್ಕೆ ಬಂದಿದ್ದಾರೆ. ಸೆಪ್ಟಂಬರ್ ತಿಂಗಳಲ್ಲಿ ರೈಲ್ವೇ ಮತ್ತು ಬಂದರುಗಳಲ್ಲಿ ಕಾರ್ಮಿಕ ಕಾರ್ಯಾಚರಣೆ ತೀವ್ರಗೊಳ್ಳುವ ಸಾಂಭವವಿದೆ.

ಆದರೆ ಸಾರ್ವತ್ರಿಕ ಮುಷ್ಕರಕ್ಕೆ ಹಲವು ಅಡಚಣೆಗಳೂ ಇವೆ. ಲೇಬರ್ ಮುಂದಾಳುಗಳ ನೇತೃತ್ವದಲ್ಲಿರುವ ಕೆಲವು ಮುಖ್ಯ ಯೂನಿಯನ್‌ಗಳು (ವಿದ್ಯುಶ್ಚಕ್ತಿ ಇತ್ಯಾದಿ) ಗಣಿಕಾರ್ಮಿಕರ ಸಮಸ್ಯೆ ಕೇವಲ ಅವರ ಸಮಸ್ಯೆ ಎಂಬ ಅಪಪ್ರಚಾರ ನಡೆಸುತ್ತಿವೆ. ಆದರೂ ಈ ಸಂಘಗಳಲ್ಲಿರುವ ಎಡ ಪಂಥೀಯರು ಮುಷ್ಕರಕ್ಕೆ ಸಿದ್ಧತೆ ನಡೆಸುತ್ತಿದ್ದಾರೆ. ಪರಿಣಾಮವಾಗಿ ಲೇಬರ್ ಪಕ್ಷದೊಳಗೆ ಎಡ-ಬಲ ಪಂಥಿಯುವರ ನಡುವೆ ತೀವ್ರ ಹೋರಾಟ ನಡೆಯುತ್ತಿದ್ದು ಅದಕೊಂದು ಸೈದ್ಧಾಂತಿಕ ಸ್ಪಷ್ಟತೆ ಬರುವ ಲಕ್ಷಣಗಳೂ ಇವೆ.

ಗಣಿ ಕಾರ್ಮಿಕರ ಜಯ-ಅಪಜಯ ಬ್ರಿಟನ್ನಿನ ರಾಜಕೀಯ ಭವಿಷ್ಯದಲ್ಲಿ ಮಹತ್ವದ ಪಾತ್ರ ವಹಿಸಲಿದೆ. ಲೇಬರ್-ಟೋರಿ ನಡುವೆ ಅಮೆರಿಕಾದ ರಿಪಬ್ಲಿಕನ್-ಡೆಮೊಕ್ರಾಟಿಕ್ ಮಾದರಿಯ ನಿರರ್ಥಕ ವ್ಯತ್ಯಾಸದ ರಾಜಕೀಯ ಆಗಲೇ ಹಳೆಯದಾಗುತ್ತಿದೆ. ಲೇಬರ್ ಪಕ್ಷ ಇದೇ ದಾರಿಯಲ್ಲಿ ಸುಸಂಗತವಾಗಿ ಮುಂದುವರಿದರೆ ಅದರ ಹೆಸರು ಸಾರ್ಥಕವಾಗಬಹುದೇನೋ. ಜಗತ್ತಿನ ಕಾರ್ಮಿಕ ಬಹುಸಂಖ್ಯೆಯ ದೇಶದಲ್ಲಿ ಈ ಬದಲಾವಣೆ ಪಶ್ಚಿಮ ಯುರೋಪಿನ ರಾಜಕೀಯಕ್ಕೆ ಹೊಸ ಬಣ್ಣ ನೀಡಬಹುದು.

— ವೀಕೆ.

ಅಖಿಲ ಭಾರತ ಪ್ರತಿಭಟನಾ ದಿನಾಚರಣೆಯ ಮಹತ್ವ

(3ನೇ ಪುಟದಿಂದ)

ಇನ್ನು ಆರು ತಿಂಗಳೊಳಗಾಗಿ ಬರಲಿಕ್ಕೆ ಲೋಕಸಭಾ ಚುನಾವಣೆಯ ಮೇಲೆ ಇವುಗಳ ಪರಿಣಾಮವೇನಾಗಬಹುದೆಂದರೆ, ಯಾವುದೇ ತರದ ಒಕ್ಕೂಟವಾಗಲೀ, ಸ್ಥಾನಗಳ ಹಂಚಿಕೆಯಾಗಲೀ 1977 ರಂತೆ ಅಖಿಲ ಭಾರತ ಮಟ್ಟದಲ್ಲಿ ಆಗಲಿಕ್ಕೆ ಸಾಧ್ಯವಿಲ್ಲ. ಕಾಂಗ್ರೆಯನ್ನು ವಿರೋಧಿಸಲು ರಾಜ್ಯ ಮಟ್ಟದಲ್ಲಿ ಪಕ್ಷಗಳನ್ನು ಒಟ್ಟಿಗೆ ಸೇರಿಸಲು ಪ್ರಯತ್ನಿಸಲಾಗುವುದು. ಪಶ್ಚಿಮ ಬಂಗಾಳ-ತ್ರಿಪುರಾಗಳಲ್ಲಿ ಎಡರಂಗವಿದೆ. ಕೇರಳದಲ್ಲಿ ಎಡ ಪ್ರಜಾಪ್ರಭುತ್ವ ರಂಗವಿದೆ. ತಮಿಳುನಾಡು, ಕರ್ನಾಟಕ, ಆಂಧ್ರ, ಒರಿಸ್ಸಾ ಮೊದಲಾದೆಡೆಗಳಲ್ಲಿ ಬೇರೆ ಬೇರೆ ತರದ ಸಂಬಂಧಗಳು ಇವೆ. ಬೆಳೆದುಬರುತ್ತಿವೆ. ಕಾಂಗ್ರೆಯನ್ನು ಸೋಲಿಸುವ ಸಲುವಾಗಿ ರಾಜ್ಯಗಳಲ್ಲಿ ವಿರೋಧಪಕ್ಷಗಳು ತಯಾರಿ ನಡೆಸಿವೆ. ಹಾಗೆ ಮಾಡುವಾಗ ಯಾವುದೇ ರಾಜಕೀಯ ಪಕ್ಷ ತನ್ನ ರಾಜಕೀಯ ಹಾಗೂ ಸೈದ್ಧಾಂತಿಕ ನಿಲುವನ್ನು ಬಿಟ್ಟುಕೊಡಬೇಕಾದ್ದಿಲ್ಲ.

ಕಾಂಗ್ರೆಯನ್ನು ಸೋಲಿಸಲಿಕ್ಕೆ ಯಾರು ಅಪೇಕ್ಷೆ ಪಡುತ್ತಾರೋ ಅವರ ಜೊತೆಯಲ್ಲಿ ಸಹಕರಿಸಲು ಸಿ.ಪಿ.ಐ (ಎಂ) ಪ್ರತಿಜ್ಞೆಮಾಡಿದೆ. ಆದರೆ ಅದೇ ಸಮಯದಲ್ಲಿ ನಮ್ಮ ಪಕ್ಷ ಅದೇ ವಿಚಾರದ ಇತರ ಪಕ್ಷಗಳೊಡನೆ ಸೇರಿಕೊಂಡು, ಸಾಮ್ರಾಜ್ಯಶಾಹಿಗಳ ಎಲ್ಲಾ ತರದ ಭಿನ್ನಕಾರಿ ಶಕ್ತಿಗಳ ವಿರುದ್ಧ ಹೋರಾಡುವ, ರಾಷ್ಟ್ರೀಯ ಅಂತರ್ರಾಷ್ಟ್ರೀಯ ಸಮಸ್ಯೆಗಳ ಕುರಿತು ನಮ್ಮ ಸ್ವತಂತ್ರ ವಿಚಾರಗಳನ್ನು ಪ್ರಚಾರಗೊಳಿಸುತ್ತದೆ.

ನೂಲಿನ ಗಿರಣಿ ಕಾರ್ಮಿಕರ ಹೋರಾಟ

ರಾಯಚೂರಿನ ಯುನಮರಸ್ ಸಹಕಾರಿ ನೂಲಿನ ಗಿರಣಿಯ 500 ಕಾರ್ಮಿಕರು ಐ.ಎನ್.ಟಿ.ಯು.ಸಿ. ಬಿಟ್ಟು ಸಿ.ಐ.ಟಿ ಯು. ನೇತೃತ್ವದಲ್ಲಿ ಆಗಸ್ಟ 3ರಿಂದಲೂ ಮುಷ್ಕರ ಹೂಡಿದ್ದಾರೆ. ಸಮಸ್ಯೆ ಬಗೆಹರಿಯಲಾರದಾದಾಗ, ಅಷ್ಟೂ ಕಾರ್ಮಿಕರು 9-9-84 ರಿಂದ ವಿಧಾನಸೌಧದೆದುರಿನಲ್ಲಿ ಸತ್ಯಾಗ್ರಹ ಪ್ರಾರಂಭಿಸಿದ್ದಾರೆ.

ಕಳೆದ 10 ವರ್ಷಗಳಿಂದಲೂ ಈ ಕೆಲಸಗಾರರು ಕಾಯಂ ಕೆಲಸ ವಿಲ್ಲದೆ, ಸರಕಾರ ನಿರ್ಧರಿಸಿದ ಸಂಬಳವಿಲ್ಲದೆ ಕಷ್ಟದಲ್ಲಿ ದುಡಿಯುತ್ತ ಬಂದಿದ್ದಾರೆ. ಮಿಲ್ಲಿಗೆ ಹಾನಿಯಾಗುತ್ತಿದೆಂಬ ನೆವದಿಂದ ರಾಜ್ಯದ ಇತರ ನೂಲಿನ ಗಿರಣಿ ಕಾರ್ಮಿಕರಿಗೆ ಸಿಗುವ ಸೌಲಭ್ಯ ಇವರಿಗೆ ಸಿಗುತ್ತಿಲ್ಲ.

ತಮ್ಮನ್ನೆಲ್ಲ ಕಾಯಂಮಾಡಬೇಕು, ತ್ರಿಪಕ್ಷೀಯ ಸಮಿತಿಯು ಶಿಫಾರಸಿನಂತೆ ತಮಗೂ ಹೆಚ್ಚಿನ ವೇತನ ಸಿಗಬೇಕೆಂಬುದೇ ಇವರ ಬೇಡಿಕೆ. ಸಹಕಾರಿ ಮಂತ್ರಿ ಜಾಲಪ್ಪನವರ ಜೊತೆಯಲ್ಲಿ ಕಾಮಿಕ ಮುಖಂಡರು ಚರ್ಚೆಮಾಡಿದಾಗ ಅವರು ಜನತಾ ಮಂತ್ರಿಯಂತೆ ವರ್ತಿಸದೆ ಕಾಂಗ್ರೆಸ್ ಮುಖಂಡರಂತೆ ವರ್ತಿಸಿರುವುದು ಖಂಡನೀಯ.

ಇವರ ಹೋರಾಟಕ್ಕೆ ರಾಜ್ಯದ ಸಿ.ಐ.ಟಿ.ಯು. ಮತ್ತು ಸಿ.ಪಿ.ಐ.(ಎಂ) ಸಂಪೂರ್ಣ ಬೆಂಬಲ ನೀಡಿದೆ. ಸಿ.ಐ.ಟಿ.ಯು. ಅಧ್ಯಕ್ಷ ಸೂರ್ಯನಾರಾಯಣರಾವ್ ಅವರು ಮಂತ್ರಿಯವರಿಗೆ ಭೆಟ್ಟಿಯಾಗಿ ಸಮಸ್ಯೆ ಬಗೆಹರಿಸಲು ಪ್ರಯತ್ನಿಸುತ್ತಿದ್ದಾರೆ.

ಕಾರ್ಮಿಕರ ಧರಣಿ ಮುಂದುವರಿದಿದೆ. ರಾಯಚೂರಿನ ಕಾರ್ಮಿಕ ಮುಖಂಡರಾದ ಪುರುಷೋತ್ತಮ ಕಲಾಲಬಂಡಿ ಮತ್ತು ತಾಯಣ್ಣ ಇವರ ನೇತೃತ್ವದಲ್ಲಿ ಚಳುವಳಿ ಮುಂದುವರಿದಿದೆ.

Printed & Published by p. Ramachandra Rao by him on behalf of the Communist party of India (Marxist) Karnataka State Committee, K. V. Temple Street, Sultanpet, Bangalore-560053 Editoral and managerial office, L-56, K V. Temple Street. Sultanpet B 53 Phone : 24514
Editor : P. Ramachandra Rao
Managing Editor : N. K. Upadhyaya